ಅಸೆಂಬ್ಲಿ ಇದೆ. ಅವರು ಮೊದಲು ದಿನಾಂಕಗಳನ್ನು ಫಿಕ್ಸ್ ಮಾಡಿರುತ್ತಾರೆ. ಇಷ್ಟು ದಿನಗಳ ಕಾಲ ನಾವು ಸಭೆ ಸೇರುತ್ತೇವೆ ಎಂದು ನಿಗದಿ ಮಾಡಿರುತ್ತಾರೆ. ಆ ರೀತಿಯಲ್ಲಿ ಮಾಡಿದರೆ ನಮಗೆ ಬಿಸಿನೆಸ್ ಆರ್ಗನೈಸ್ ಮಾಡಿಕೊಳ್ಳಲು ಅನುಕೂಲವಾಗುತ್ತದೆ ಎಂದು ಅವರು ವಿರೋಧಪಕ್ಷದವರು ಹೇಳುತ್ತಿದ್ದಾರೆ.

ಶ್ರೀ ಸಿದ್ದರಾಮಯ್ಯ : ಇಲ್ಲಿಯೂ ಅದೇ ತರಹ ಮಾಡೋಣ.

ಶ್ರೀ ವಾಟಾಳ್ ನಾಗರಾಜ್ : ಲೋಕಸಭೆಯಲ್ಲಿ ಒಂದು ನಿಗದಿಯಾಗಿ ಆಯವ್ಯಯ ಯಾವಾಗ ಮಂಡನೆ ಮಾಡಬೇಕು? ಬೇಸಿಗೆ ಕಾಲದ ಅಧಿವೇಶನ, ಚಳಿಗಾಲದ ಅಧಿವೇಶನ ಮುಂತಾಗಿ ಎಲ್ಲವನ್ನೂ ಆಯಾಯ ಸಂದರ್ಭಕ್ಕೆ ತಕ್ಕಂತೆ ಮಾಡಿಕೊಳ್ಳಲು ನೇರವಾಗಿ ಅದನ್ನು ಅಧ್ಯಕ್ಷರಿಗೆ ಒಪ್ಪಿಸಿರುತ್ತಾರೆ. ಆದರೆ ಇಲ್ಲಿ ಸರಕಾರದವರು ಕರೆದಾಗ ನೀವು ತಯಾರಾಗಿರಬೇಕು. ಈ ತರಹದ ಸ್ಥಿತಿ ಇರುವುದು ಒಳ್ಳೆಯದಲ್ಲ.

ಶ್ರೀ ಸಿದ್ಧರಾಮಯ್ಯ : ಇಲ್ಲಿ ನಾವು ಕೇಂದ್ರ ಸರಕಾರಕ್ಕೂ ರಾಜ್ಯ ಸರಕಾರಕ್ಕೂ ಹೋಲಿಕೆ ಮಾಡಲು ಆಗುವುದಿಲ್ಲ. ರಾಜ್ಯ ಸರಕಾರ ಅಂದರೆ ಕಾರ್ಯಕ್ರಮಗಳನ್ನು ಇಂಪ್ಲಿಮೆಂಟ್ ಮಾಡತಕ್ಕಂಥ ಸರಕಾರ. ಕೇಂದ್ರ ಸರಕಾರದಲ್ಲಿ ಮಾಡತಕ್ಕಂಥ ಆಡಳಿತ ವೈಖರಿ ಕುರಿತು ನೀವು ಯೋಚನೆ ಮಾಡಬೇಕಾಗುತ್ತದೆ. ಇಲ್ಲಿ ನಾವು ವಿಷಯಗಳನ್ನು ಚೆನ್ನಾಗಿ ಚರ್ಚೆ ಮಾಡಬೇಕು, ಸರಕಾರದ ಬಗ್ಗೆ ಹೇಳಲು ನಮಗೆ ಹೆಚ್ಚು ಅವಕಾಶ ಕೊಡಬೇಕು, ಮುಂತಾದ ವಿಚಾರಗಳ ಬಗ್ಗೆ ಎಲ್ಲರೂ ಕುಳಿತುಕೊಂಡು ಚರ್ಚೆ ಮಾಡೋಣ. ಆ ಬಗ್ಗೆ ಒಂದು ತೀರ್ಮಾನಕ್ಕೆ ಬರೋಣ.

ಅಧ್ಯಕ್ಷರು : ಮಾನ್ಯ ಕಂದಾಯ ಸಚಿವರು ವಿಧೇಯಕವನ್ನು ಪರ್ಯಾಲೋಚನೆ ಮತ್ತು ಅಂಗೀಕಾರಕ್ಕಾಗಿ ಮಂಡಿಸುವುದು.

ಶಾಸನ ರಚನೆ

ವಿಧೇಯಕವನ್ನು ಪರ್ಯಾಲೋಚಿಸುವುದು ಮತ್ತು ಅಂಗೀಕರಿಸುವುದು.

ಕರ್ನಾಟಕ ಭೂ ಸುಧಾರಣೆಗಳ (ತಿದ್ದುಪಡಿ) ವಿಧೇಯಕ, 1997

ಪರ್ಯಾಲೋಚನ ಪ್ರಸ್ತಾವ

ಶ್ರೀ ಬಿ. ಸೋಮಶೇಖರ್ (ಕಂದಾಯ ಮಂತ್ರಿಗಳು) : ಮಾನ್ಯ ಅಧ್ಯಕ್ಷರೇ, ಕರ್ನಾಟಕ ಭೂ ಸುಧಾರಣೆಗಳ (ತಿದ್ದುಪಡಿ) ವಿಧೇಯಕ, 1997ನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವವನ್ನು ಮಂಡಿಸಲಾಯಿತು.

+ ಶ್ರೀ ಬಿ. ಸೋಮಶೇಖರ್ (ಕಂದಾಯ ಮಂತ್ರಿಗಳು) : ಮಾನ್ಯ ಸಭಾಧ್ಯಕ್ಷರೇ, ನಮ್ಮ ಕರ್ನಾಟಕ ರಾಜ್ಯದಲ್ಲಿ ಬಹಳ ಮಹತ್ತರವಾದ ಕಂದಾಯ ಇಲಾಖೆಯಲ್ಲಿ 1974ರಲ್ಲಿ ಒಂದು ತಿದ್ದುಪಡಿಯನ್ನು ಶ್ರೀಮಾನ್ ದೇವರಾಜ್ ಅರಸ್‌ರವರು ತಂದು, ಗೇಣಿದಾರರು ನಮ್ಮ ರಾಜ್ಯದಲ್ಲಿ

ಯಾರಿದ್ದಾರೆ, ಅವರಿಗೆ ಹಕ್ಕು ನೀಡತಕ್ಕಂಥ ಒಂದು ಕಾನೂನನ್ನು ತಂದು ಒಂದು ಒಳ್ಳೆಯ ಕಾನೂನು ಮತ್ತು ಸಂಪ್ರದಾಯವನ್ನು ತಂದಿದ್ದರು. ತಮಗೆ ಗೊತ್ತಿರುವ ಹಾಗೆ ಗೇಣಿದಾರರು ಬಡವರು ಅವಿದ್ಯಾವಂತರು ಮತ್ತು ಹಳ್ಳಿಗಳಲ್ಲಿ ಬೇಸಾಯ ಮಾಡಿಕೊಂಡಿರತಕ್ಕಂಥ ಜನರು. ಕೆಲವರು ತಿಳಿಯದೇ ಅರ್ಜಿಯನ್ನು ಹಾಕಿ ತಮ್ಮ ಹೆಸರಿಗೆ ಹಕ್ಕನ್ನು ಮಾಡಿಕೊಳ್ಳತಕ್ಕಂಥ ಕೆಲಸದಲ್ಲಿ ವಿಫಲರಾಗಿದ್ದಾರೆ. ಈ ಕಾನೂನಿನ ಅಡಿಯಲ್ಲಿ ಫಾರ್ಮ್‌ನಂಬರ್-7 ಇದರಲ್ಲಿ ಅರ್ಜಿಹಾಕಿ ಅವರ ಹೆಸರಿಗೆ ಖಾತೆ ಮಾಡಿಕೊಳ್ಳಬೇಕಾದಂತಹ ಸಾಧ್ಯತೆ ಇದೆ. ಆದರೆ ಬಹಳ ಜನ ಬಡ ರೈತರು ಜಮೀನಿನಲ್ಲಿ ಗೇಣಿದಾರರಾಗಿ ಕೆಲಸ ಮಾಡುತ್ತಾ ಇದ್ದಾರೆ, ಆದರೂ ಅರ್ಜಿ ಹಾಕಿಕೊಳ್ಳುವುದರಲ್ಲಿ ವಿಫಲರಾಗಿದ್ದಾರೆ. ಅಂಥ ಸಹಸ್ರಾರು ರೈತರು ನಮ್ಮ ರಾಜ್ಯದಲ್ಲಿ ಇದ್ದಾರೆ. ಅವರು ಪೊಸಿಶನ್‌ನಲ್ಲಿದ್ದಾರೆ, ಬೇಸಾಯವನ್ನು ಮಾಡುತ್ತಾ ಇದ್ದಾರೆ, ಆದರೆ ಫಾರ್ಮ್ ನಂಬರ್-7ರಲ್ಲಿ ಅರ್ಜಿ ಸಲ್ಲಿಸಿ ತಮ್ಮ ಹೆಸರಿನಲ್ಲಿ ಖಾತೆಯನ್ನು ಮಾಡಿಕೊಳ್ಳದೇ ಇರುವುದರಿಂದ ಆರ್‌ಟಿಸಿ ಕಾಲಂ ನಂ.9ರಲ್ಲಿ ಅವರ ಹೆಸರು ಇಲ್ಲ. ಆದರೆ ಅದು ಸರಕಾರಿ ಜಮೀನು ಎಂದು ಅಲ್ಲಿ ಸರಕಾರದ ಹೆಸರು ಬಂದಿದೆ. ಹೀಗೆ ಸರಕಾರದ ಹೆಸರು ಇರುವುದರಿಂದ ಅವರು ತಮ್ಮ ಜಮೀನನ್ನು ಅಭಿವೃದ್ಧಿ ಮಾಡಲು ಆಗುವುದಿಲ್ಲ. ಅವರು ಲೋನ್ ಪಡೆದುಕೊಳ್ಳಲು, ಪಂಪ್‌ಸೆಟ್‌ಗಳನ್ನು ಹಾಕಿಕೊಳ್ಳಲು, ಮುಂತಾಗಿ ಯಾವುದೇ ರೀತಿಯಲ್ಲಿ ಸೌಲಭ್ಯಗಳಿಂದ ಅಭಿವೃದ್ಧಿ ಮಾಡಿಕೊಳ್ಳಲು ಅವರಿಂದ ಆಗುತ್ತಾ ಇಲ್ಲ. ಹೀಗಾಗಿ ನಮ್ಮ ರಾಜ್ಯದ ರೈತರಿಗೆ ಬಹಳ ತೊಂದರೆಯಾಗಿದೆ. ಉದಾಹರಣೆಗೆ ದಕ್ಷಿಣ ಕನ್ನಡ ಜಿಲ್ಲೆ ಒಂದರಲ್ಲಿಯೇ ಸುಮಾರು 20,000 ಜನರು ಈ ಪರಿಸ್ಥಿತಿಯಲ್ಲಿದ್ದಾರೆ. ಒಂದು ಜಿಲ್ಲೆಯಲ್ಲಿ ಇಷ್ಟು ಜನರಿದ್ದರೆ ಇಡೀ ರಾಜ್ಯದಲ್ಲಿ ಇಂಥವರು ಎಷ್ಟು ಸಾವಿರ ಇರಬಹುದು ಎಂದು ನಾವು ಊಹಿಸಬಹುದು. ಕಾನೂನಿನ ರೀತ್ಯಾ ದಿನಾಂಕವನ್ನು ಕೊನೆ ಮಾಡಿದ್ದರಿಂದ ಆಗ ಅವರು ಅರ್ಜಿಯನ್ನು ಹಾಕಿಕೊಳ್ಳಲು ಆಗಿರಲಿಲ್ಲ. ಆದ್ದರಿಂದ ನಾವು ಹೊಸದಾಗಿ ತಿದ್ದುಪಡಿಯನ್ನು ತಂದಿದ್ದೇವೆ. ಜಿಲ್ಲಾಧಿಕಾರಿಗಳು ಸ್ವತಃ ಖುದ್ದಾಗಿ ಹೋಗಿ ಪರಿಶೀಲನೆ ಮಾಡಿ, ಆ ಜಮೀನಿನಲ್ಲಿ ಯಾರು ಗೇಣಿ ಮಾಡುತ್ತಿದ್ದಾರೆ ಎಂಬುದು ಅವರಿಗೆ ತೃಪ್ತಿಕರವಾದ ಮೇಲೆ, ಅಂಥವರಿಗೆ ರೆಗ್ಯುಲರೈಸ್ ಮಾಡತಕ್ಕಂಥ ಒಂದು ಅಧಿಕಾರವನ್ನು ನಾವು ಜಿಲ್ಲಾಧಿಕಾರಿಯವರಿಗೆ ಕೊಡುತ್ತಿದ್ದೇವೆ. ಇದು ಬಹಳ ದಿನಗಳ ಹಿಂದೆಯೇ ಆಗಬೇಕಾಗಿರತಕ್ಕಂಥ ಕೆಲಸ. ಇದರ ಬಗ್ಗೆ ನಾವು ಬಹಳ ಸವಿಸ್ತಾರವಾಗಿ ಚರ್ಚಿಸಿ ಸಚಿವ ಸಂಪುಟದಲ್ಲಿ ಚರ್ಚಿಸಿ ತೀರ್ಮಾನಕ್ಕೆ ಬಂದು ಮಸೂದೆಯನ್ನು ತಂದಿದ್ದೇವೆ. ಇದರಿಂದ ರಾಜ್ಯದ ಗೇಣಿದಾರರಿಗೆ ಬಹಳ ಉತ್ತಮವಾದಂಥ ಕೆಲಸವಾಗುತ್ತದೆ. ಆದಕಾರಣ ತಮ್ಮ ಮುಖಾಂತರ ಮಾನ್ಯ ಸದಸ್ಯರುಗಳೆಲ್ಲರಲ್ಲಿ ಕೇಳಿಕೊಳ್ಳುತ್ತಿದ್ದೇನೆ. ಇದರಿಂದ ರಾಜ್ಯದ ಗೇಣಿದಾರರಿಗೆ ಅನುಕೂಲವಾಗುತ್ತದೆ ಎಂದು ಹೇಳುತ್ತಾ ಇದಕ್ಕೆ ತಾವುಗಳು ಅನುಮತಿಯನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

+ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೇ, ಇದರ ಉದ್ದೇಶವು ಬಹಳ ಒಳ್ಳೆಯದು. ಭೂಸುಧಾರಣೆ ಕಾನೂನಿನ ಅಡಿಯಲ್ಲಿ ಯಾವ ಅರ್ಜಿದಾರರು ಇಲ್ಲಿಯವರೆಗೆ ಅರ್ಜಿಯನ್ನು ಹಾಕದೆ ಅವರ ಜಮೀನುಗಳನ್ನು ಸೆಕ್ಷನ್-44ರ ಪ್ರಕಾರ ಸರಕಾರ ವಹಿಸಿಕೊಂಡಿದೆ, ಅಂಥವರಿಗೆ ಪುನಃ ಅರ್ಜಿಯ ಮೂಲಕ ಜಿಲ್ಲಾಧಿಕಾರಿಗಳ ಮುಖಾಂತರ ಇದನ್ನು

ಒಂದು ಯೂನಿಟ್‌ವರೆಗೆ ಗ್ರ್ಯಾಂಟ್ ಮಾಡಿಕೊಡಬೇಕೆನ್ನತಕ್ಕಂಥ ಅಧಿಕಾರವನ್ನು ಕೊಡುತ್ತಾ ಇದ್ದಾರೆ. ಈಗ ಟೆನೆನ್ಸಿ ಆಕ್ಟ್‌ನ ಪ್ರಕಾರ, ಕೆಲವು ಕಡೆ ಒಂದು ಯೂನಿಟ್ ಅಂದರೆ ಹೆಚ್ಚು ಕಡಿಮೆ 5 ಎಕರೆಗಳು (2ಹೆಕ್ಟೇರ್) ಆಗುತ್ತದೆ. ಒಬ್ಬ ಟೆನೆಂಟ್ ಒಂದು ಯೂನಿಟ್‌ಗಿಂತ ಹೆಚ್ಚು ಇರಬಹುದು. ಮೊದಲು ಅವನು ಲ್ಯಾಂಡ್ ರಿಫಾರ್ಮ್ಸ್ ಆಕ್ಟ್‌ನ ಕೆಳಗೆ ಯಾವಾಗ ನಿಗದಿತವಾದಂಥ ಸಮಯ ಇತ್ತು, ಈ ಸಮಯದ ಒಳಗಾಗಿ ಅರ್ಜಿಯನ್ನು ಕೊಟ್ಟಾಗ, ನೇರವಾಗಿ ಲ್ಯಾಂಡ್‌ಟ್ರಿಬ್ಯೂನಲ್‌ನಲ್ಲಿ ಅದನ್ನು ಖಾಯಂ ಮಾಡಿಕೊಟ್ಟರು. ಯಾವುದೇ ಕಾರಣಕ್ಕಾಗಿ, ಅಥವಾ ಅರ್ಜಿದಾರನ ನಿರ್ಲಕ್ಷ್ಯತನದಿಂದಾಗಿ ಅಥವಾ ಅಲ್ಲಿರತಕ್ಕಂಥ, ಲ್ಯಾಂಡ್‌ಲಾರ್ಡ್ ತಡೆಹಿಡಿದು ರೈತರು ಅಪ್ಲಿಕೇಷನ್ ಕೊಡದೇ ಇರಬಹುದು. ಅಥವಾ ಇನ್ನಾವುದೇ ಕಾರಣಕ್ಕಾಗಿ ಅರ್ಜಿ ಕೊಡದಿದ್ದ ಕಾರಣಕ್ಕಾಗಿ ಅವನು ತನ್ನ ಹಿಡುವಳಿಯಲ್ಲಿ ಇರತಕ್ಕಂಥ ಜಮೀನನ್ನು ಕಳೆದುಕೊಳ್ಳತಕ್ಕಂಥ ಪರಿಸ್ಥಿತಿಯೂ ಕೂಡ ಬಂದಿದೆ. ಇವೊತ್ತು ನಾವು ಒಂದು ಯೂನಿಟ್ ಮಾತ್ರ ಇಟ್ಟಿದ್ದೇವೆ. ಡ್ರೈಲ್ಯಾಂಡ್‌ನಲ್ಲಿ ಬರತಕ್ಕಂಥ ಹತ್ತು ಮತ್ತು ಎರಡು. ಒಬ್ಬ 15 ಎಕರೆ ಮೇಲೆ ಅವನು ಟೆನೆಂಟ್ ಇದ್ದರೆ, ಉಳಿದ ಐದು ಎಕರೆಗಳನ್ನು ನೀವೇನು ಫೋರ್‌ಫಿಟ್ ಮಾಡುತ್ತೀರೊ ಅಥವಾ ಬೇರೆಯವರಿಗೆ ಹಂಚುತ್ತೀರೋ? ಅದು ಯಾರಿಗೆ ಹೋಗಬೇಕು? ತಾವು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ರಾಜ್ಯದ ಒಟ್ಟು 8ಲಕ್ಷ ಗೇಣಿದಾರರಲ್ಲಿ ಮೂರನೇ ಒಂದು ಭಾಗದಷ್ಟು ಗೇಣಿದಾರರು ಇದ್ದಾರೆ ಎಂದು ಹೇಳಿದ್ದೀರಿ. ದಕ್ಷಿಣ ಕನ್ನಡ, ಉತ್ತರ ಕನ್ನಡ ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿ ರಾಜ್ಯದ ಅರ್ಧದಷ್ಟು ಗೇಣಿದಾರರು ಇದ್ದಾರೆ. ಉಳಿದೆಲ್ಲಾ ಭಾಗದಲ್ಲಿ50ಪರ್‌ಸೆಂಟ್‌ನಷ್ಟು ಇದ್ದಾರೆ. ಅಂಥ ಒಂದು ಪರಿಸ್ಥಿತಿ ಇದೆ. ತಾವುಗಳು ಒಂದು ಯೂನಿಟ್ ಎಂದು ಮಾಡಿದರೆ ಎಲ್ಲಿ ಡ್ರೈಲ್ಯಾಂಡ್ ಏರಿಯಾದಲ್ಲಿ ಅಂದರೆ ಅದು ಚಿತ್ರದುರ್ಗ, ಧಾರವಾಡ, ಬೆಳಗಾಂ, ರಾಯಚೂರು, ಗುಲ್ಬರ್ಗಾ ಭಾಗಗಳಲ್ಲಿ ಅನೇಕ ಜನರು ಒಂದು ಯೂನಿಟ್‌ಗಿಂತ ಹೆಚ್ಚು ಜಮೀನನ್ನು ಹೊಂದಿದ್ದಾರೆ. ಅವರ ಗತಿ ಏನಾಗಬೇಕು ಮತ್ತು ಅವರಿಗೆ ಯಾವ ದಾರಿಯನ್ನು ನೀವು ಹುಡುಕಿದ್ದೀರಿ? ಅಂತೆಯೇ ಇದನ್ನು ಹಿಂದೆ ಲ್ಯಾಂಡ್‌ಟ್ರಿಬ್ಯೂನಲ್‌ಗೆ ಅಧಿಕಾರವನ್ನು ಕೊಟ್ಟಿದ್ದರು. ಲ್ಯಾಂಡ್ ಟ್ರಿಬ್ಯೂನಲ್‌ನಲ್ಲಿ ಮೂರು ಜನ ನಾನ್ ಅಫೀಷಿಯಲ್ ಸದಸ್ಯರು ಮತ್ತು ಒಬ್ಬ ಶಾಸಕರು ಅದಕ್ಕೆ ಸದಸ್ಯರಾಗಿದ್ದರು. ಅಸಿಸ್ಟೆಂಟ್ ಕಮೀಷನರ್ ಅದಕ್ಕೆ ಅಧ್ಯಕ್ಷರಾಗಿದ್ದರು. ಆದರೆ ನೀವು ಇವೊತ್ತು ಅದನ್ನು ಸ್ಪೆಶಲ್ ಡಿ.ಸಿ.ಯವರಿಗೆ ಕೊಡುವುದರಿಂದ ಹಿಂದೆ ನೀವು ಲ್ಯಾಂಡ್ ಟ್ರಿಬ್ಯೂನಲ್‌ನಲ್ಲಿ ನಾನ್ ಅಫೀಷಿಯಲ್ ಸದಸ್ಯರನ್ನು ಇಟ್ಟು ಏನು ನ್ಯಾಯ ಸಿಗುತ್ತಿತ್ತೋ ಅದನ್ನು ಈಗ ನೀವು ಏಕೆ ಮಾಡುತ್ತಾ ಇಲ್ಲ? ಶಾಸಕರನ್ನು ಏಕೆ ಇನ್‌ವಾಲ್ವ್ ಮಾಡುತ್ತಿಲ್ಲ? ಏಕೆಂದರೆ ಲಕ್ಷಾಂತರ ಕೇಸ್‌ಗಳನ್ನು ಡಿಸ್ಪೋಸ್ ಮಾಡುವಲ್ಲಿ ನಾವು ನಾನ್‌ಅಫೀಷಿಯಲ್ ಮೆಂಬರ್ಸ್ ಮೇಲೆ ನಂಬಿಕೆ ಇಟ್ಟು, ಯಾರು ಕಮಿಟೆಡ್ ವರ್ಕರ್ಸ್ ಇದ್ದಾರೆ, ಅವರಿಗೆ ಅದರ ಸದಸ್ಯರನ್ನಾಗಿ ಮಾಡಿ, ಹಂಚತಕ್ಕಂಥಾದ್ದು ಇದೆ. ಎಲ್ಲಿ ಕಮಿಟೆಡ್ ಕಾರ್ಯಕರ್ತರು ಇಲ್ಲ, ಅಥವಾ ಮೆಂಬರ್ಸ್ ಇಲ್ಲ, ಅದು ಯಾವುದೇ ಪಕ್ಷದವರು ಇರಬಹುದು ಅಲ್ಲಿ ಅನ್ಯಾಯವೂ ಕೂಡ ಆಗಿದೆ, ಇದನ್ನು ನಾನು ಒಪ್ಪಿಕೊಳ್ಳುತ್ತೇನೆ. ಕೆಲವು ಕಡೆ ಎಂಎಲ್‌ಎ ಗಳು ಅಥವಾ ಕೆಲವು ನಾನ್ ಅಫಿಷಿಯಲ್ ಮೆಂಬರ್ಸ್ ಅವರ ಮೇಲೆ ಆಳಿನ ಹೆಸರಿನಲ್ಲಿ ಕೆಲವು ಜಮೀನುಗಳನ್ನು ಮಾಡಿಕೊಂಡಿದ್ದಾರೆ. ಬೇನಾಮಿ ಟ್ರಾನ್ಸ್‌ಕ್ಷನ್ ಮಾಡಿದ್ದಾರೆ. ಅದಕ್ಕೆ ಪ್ರೋತ್ಸಾಹ ಕೊಟ್ಟಿದ್ದಾರೆ. ಇಲ್ಲಿ ನೀವು ಡೆಪ್ಯುಟಿ

ಕಮೀಷನರ್‌ಗೆ ಪವರ್ಸ್ ಕೊಡುವುದರಿಂದ ಇನ್ನೂ ಕೂಡ ಪ್ರಭಾವದಿಂದ ಬಂದು ನೀವು ಹೇಳಿದಂತೆ ಕೇಳಿಕೊಂಡು ಹೋಗುವ ಸಾಧ್ಯತೆ ಕೂಡ ಇದ್ದಾವೆ. ಅದಕ್ಕಾಗಿ ಇದಕ್ಕೆ ಆಟ್‌ಲೀಸ್ಟ್ ನಾನ್ ಅಫಿಷಿಯಲ್ ಮೆಂಬರ್ಸ್‌ನ್ನು ಏಕೆ ಮಾಡಬಾರದು? ನೀವು ಸೊಮೊಟೊ ಸ್ಪೆಷಲ್ ಡೆಪ್ಯುಟಿ ಕಮೀಷನರ್ ಒಬ್ಬರಿಗೆ ಅಧಿಕಾರವನ್ನು ಕೊಟ್ಟರೆ ಇದು ಅನೇಕಸಾರಿ ಸ್ಪೆಷಲ್ ಡೆಪ್ಯುಟಿ ಕಮೀಷನರ್ ಮುಖಾಂತರ ಅಲ್ಲಿ ಲಂಚ ತೆಗೆದುಕೊಂಡು ನೇರವಾಗಿ ಟೆನೆಂಟ್‌ಗೆ ಡಿಸ್‌ಪೊಸೆಷ್ ಮಾಡಿದ್ದು ಕೇಸ್‌ಗಳು ಎಷ್ಟೋ ಇವೆ. ಇಲ್ಲೂ ಕೂಡ ಪಹಣಿಯಲ್ಲಿ ತಿದ್ದುಪಡಿಯಾದರೆ ಆ ರೆಕಾರ್ಡ್ಸ್ ಮೇಲೆ ಅವನು ನೇರವಾಗಿ ಕೊಡುವ ಸಾಧ್ಯತೆ ಇದೆ. ಅದಕ್ಕಾಗಿ ನೀವು ಎನ್‌ಕ್ವೈರಿ ಮಾಡಿ ಕೊಡಿಸಬೇಕು ಎನ್ನುವಂಥದ್ದು ನಾವು ಹೇಳಿದೆವು. ಇದನ್ನು ಎನ್‌ಕ್ವೈರಿ ಮಾಡಿ ಕೊಡಿಸಬೇಕೆಂದರೆ ಫಿಸಿಕಲ್ ಆಗಿ ಹೋಗಿ ವೆರಿಫೈ ಮಾಡಿ ನೋಡಿದರೆ ಅದು ಸಾಧ್ಯ ಇದೆ. ಇಲ್ಲದಿದ್ದರೆ ಅದು ಸಾಧ್ಯವಿಲ್ಲ. ಅನೇಕ ಅಧಿಕಾರಿಗಳು ಹೋಗುವುದಿಲ್ಲ. ಮತ್ತು ದುರ್ದೈವದಿಂದ ನಾವು ಅನೇಕ ಇಂಥ ಒಂದು ಕಾನೂನುಗಳನ್ನು ಜಾರಿಯಲ್ಲಿ ತರತಕ್ಕಂಥ ಜಾಗದಲ್ಲಿ ಕಮಿಟೆಡ್ ಆಫೀಸರ್ಸ್‌ನ್ನು ಹಾಕುವುದಿಲ್ಲ. ಕಮಿಟೆಡ್ ಎಂದರೆ ನನ್ನರ್ಥ ಈ ಒಂದು ಕಾನೂನಿನ ಮೇಲೆ ಶ್ರದ್ಧೆ ಇರುವ ಅಧಿಕಾರಿಗಳು ಅಥವಾ ಈ ಕಾನೂನನ್ನು ಜಾರಿಯಲ್ಲಿ ತರಬೇಕು ಎನ್ನುವ ಇಚ್ಛಾಶಕ್ತಿ ಇರುವ ಅಧಿಕಾರಿಗಳಿಗೆ ನಾವು ಅಲ್ಲಿ ಪೋಸ್ಟಿಂಗ್ ಕೊಡುವುದಿಲ್ಲ. ಆ ಪೋಸ್ಟಿಂಗ್ ಕೊಡದೇ ಇದ್ದ ಕಾರಣ ಏನಾಗುತ್ತದೆ, ಯಾರು "ಜಿಸ್‌ಕಿ ಲಾಠಿ ವುಸ್‌ಕಿ ಬೈಸ್" ಎನ್ನುವ ಹಾಗೆ ಯಾರದು ಸ್ವಲ್ಪ ಮಾತು ನಡೆಯುತ್ತದೆಯೋ ಅಥವಾ ಲಂಚ ಕೊಟ್ಟು ತಿದ್ದುಪಡಿ ಮಾಡಿಕೊಂಡು ಪಹಣಿಯಲ್ಲಿ ಏನಾದರೂ ಸೇರಿಸಿ ಕೊಂಡರೆ ಯಾರದಾದರೂ ಒಂದು ಪ್ರಭಾವ ಇದ್ದರೆ ಇವತ್ತಿನ ದಿವಸ ಅವನು ಈ ಜಮೀನನ್ನು ಕಬಳಿಸುವ ಸಾಧ್ಯತೆ ಇದೆ. ಅದಕ್ಕೆ ದಯವಿಟ್ಟು ಇದರ ಬಗ್ಗೆ ತಾವು ಹೇಳಬೇಕು ಮತ್ತು ಒಂದು ಭರವಸೆಯನ್ನಾದರೂ ತಾವು ಈ ಸದನಕ್ಕೆ ಕೊಡಬೇಕು. ಎಲ್ಲೆಲ್ಲಿ ಇಂಥ ಕೇಸುಗಳ ಬಗ್ಗೆ ಅವರು ತೀರ್ಮಾನ ತೆಗೆದುಕೊಳ್ಳುವ ಸ್ಥಳಗಳಿವೆ. ಉದಾಹರಣೆಗೆ ಇಂಥ ಕೇಸಸ್ ಸೌತ್ ಕೆನರಾದಲ್ಲಿ ಜಾಸ್ತಿ ಇರಬಹುದು. ಶಿವಮೊಗ್ಗದಲ್ಲಿ ಇರಬಹುದು. ಇಂಥ ಜಿಲ್ಲೆಗಳಲ್ಲಾದರೂ ಕೂಡ ಒಳ್ಳೆಯ ಅಧಿಕಾರಿಗಳನ್ನು ಹಾಕಿ ಈ ಕಾನೂನನ್ನು ಕಟ್ಟುನಿಟ್ಟಾಗಿ ಜಾರಿಯಲ್ಲಿ ತರತಕ್ಕಂಥ ದಿಸೆಯಲ್ಲಿ ಸರ್ಕಾರದವರು ಕಾರ್ಯವನ್ನು ಮಾಡಬೇಕು. ಇಲ್ಲದಿದ್ದರೆ ಯಾರಿಗೂ ನೀವು ಸುಮ್ಮನೆ ನಾಮಕಾವಸ್ಥೆ ಒಬ್ಬ ಅಧಿಕಾರಿಯನ್ನು ನಾಮಿನೇಟ್‌ಮಾಡಿ ಅವನಿಗೆ ಈ ಅಧಿಕಾರವನ್ನು ಕೊಟ್ಟರೆ ಅವನು ಯಾರ್ಯಾರಿಗೆ ಸ್ಯಾಂಕ್ಷನ್ ಮಾಡುತ್ತಾನೋ ಪರ್ ಎಕರೆಗೆ ಎರಡು ಸಾವಿರ, ಐದು ಸಾವಿರ, ಭೂಮಿ ಮೇಲೆ ಬೆಲೆ ನೋಡಿಕೊಂಡು ಹಣ ತೆಗೆದುಕೊಂಡು ಸ್ಯಾಂಕ್ಷನ್ ಮಾಡಿಕೊಡುವ ಸಾಧ್ಯತೆ ಇದೆ. ಅದಕ್ಕೆ ಇದರ ಬಗ್ಗೆ ಅವರು ಚಿಂತನೆ ಮಾಡಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ. ಅದರ ಬಗ್ಗೆ ಕೂಡ ಸ್ಪಷ್ಟವಾಗಿ ಅವರು ಹೇಳಬೇಕು. ಎರಡನೆಯದು, ಏನೆಂದರೆ: "being entitled to register as occupant of such land under Section 45 or 49 has *failed to apply for* occupancy rights in respect of such lands under section.... within the period specified." ಎಂದಿದೆ. ಇದರಲ್ಲಿ ಇನ್ನೊಂದು ಸಾಧ್ಯತೆ ಏನಾಗುತ್ತದೆ ಎಂದರೆ ಈ ನೆಪದಲ್ಲಿ ಹಳ್ಳಿಗಳಲ್ಲಿ ಹೆಚ್ಚಿನ ವ್ಯಾಜ್ಯಗಳು ಪ್ರಾರಂಭವಾಗುವ ಸಾಧ್ಯತೆ ಇದೆ. ಏಕೆಂದರೆ ಅದೇ ಜಮೀನನ ಮೇಲೆ ಹತ್ತತ್ತು

ಅರ್ಜಿಗಳನ್ನು ಕೊಡುವುದು. ಈ ಲ್ಯಾಂಡ್‌ಲಾರ್ಡ್ ಏನು ಮಾಡುತ್ತಾರೆ, ಅವರೇ ಪ್ರೋತ್ಸಾಹವನ್ನು ನೀಡಿ ಇದು ಕಾನೂನಿನಲ್ಲಿ ಮಾತ್ರ ಡೆಪ್ಯುಟಿ ಕಮೀಷನರ್ ವೆಸ್ಟೆಡ್ ಮಾಡಿಕೊಂಡಿದ್ದಾರೆ. ಆದರೆ ಆಕ್ಚುಯಲ್ ಪೊಸೆಷನ್‌ನಲ್ಲಿ ಟೆನೆಂಟೇ ಇದ್ದಾನೆ. ಇದು ಮಾನ್ಯ ಮಂತ್ರಿಗಳಿಗೆ ಗೊತ್ತಿರಬಹುದು- ಅಥವಾ ಇಲಾಖೆಯವರಿಗೂ ಗೊತ್ತಿರಬಹುದು. ಆಕ್ಚುಯಲ್ ಪೊಸೆಷನ್ ಟೆನೆಂಟ್ ಇದ್ದಾರೆ. ಆದರೆ ಕಾನೂನಿನಲ್ಲಿ, ಪಹಣಿಯಲ್ಲಿ ವೆಸ್ಟೆಡ್ ಎಂದು ಹೇಳಿ ಸರ್ಕಾರದವರು ಬರೆದುಕೊಂಡಿದ್ದು. ಆಗ ಏನಾಗುತ್ತದೆ, ಅರ್ಜಿಗಳನ್ನು ಹಾಕುವ ಡೇಟನ್ನು ನಾವು ಎಕ್ಸ್‌ಟೆಂಡ್ ಮಾಡಿದಾಗ ಈ ಭೂಮಾಲಿಕ ಪುನಃ ಅರ್ಜಿಯನ್ನು ಬೇರೆಯವರಿಂದಲೂ ಹಾಕಿಸುವ ಸಾಧ್ಯತೆ ಇದೆ. ಹಾಕುವ ಸಾಧ್ಯತೆ ಇದ್ದಾಗ ಈ ಒರಿಜಿನಲ್ ಟೆನೆಂಟ್‌ಗೂ ಮತ್ತು ಇವನಿಗೂ ಜಗಳ ಪ್ರಾರಂಭವಾಗುತ್ತದೆ. ಈ ಜಗಳ ಮಾಡಿಸಬೇಕು ಎಂದೇ ಹೇಳಿಯೇ ಅಥವಾ ಈ ವ್ಯಾಜ್ಯ ನಡೆಸಬೇಕು ಎಂದು ಹೇಳಿಯೇ ಅವರ ಇಚ್ಛೆ ಇರುತ್ತದೆ. ಇದರಲ್ಲಿ ಕೊನೆಗೆ ಏನಾಗುತ್ತದೆ ಎಂದರೆ ಆ ಟೆನೆಂಟನ್ನು ಬಿಡಿಸಿ ಮತ್ಯಾರೋ ಅದನ್ನು ತೆಗೆದುಕೊಳ್ಳುವ ಆ ರೆಕಾರ್ಡ್ ಬೇಸಿಸ್ ಮೇಲೆ ಸಾಧ್ಯತೆ ಇದೆ. ಅದಕ್ಕೆ ನೀವು ಎಕ್ಸ್‌ಟೆಂಡ್ ಮಾಡಿದ ಡೇಟ್, ಇದರ ದುರುಪಯೋಗವನ್ನು ಬೇರೆಯವರು ಪಡಿಸಿಕೊಳ್ಳಬಹುದು. ಅದನ್ನು ಕೂಡ ನೋಡಬೇಕಾಗುತ್ತದೆ. ಇದಕ್ಕೇನಾಗಬೇಕೆಂದರೆ ಪ್ರತಿ ತಿಂಗಳು ರೆವ್ಯೂ ಆಗಬೇಕು. ಆಗ ಸಾಧ್ಯ ಇದೆ. ಸುಮ್ಮನೆ ನಾವು ಕಾನೂನು ಮಾಡಿಕೊಡುತ್ತೇವೆ ಎಂದರೆ ಸಾವಿರಾರು ಅರ್ಜಿಗಳು ಬರುತ್ತವೆ. ಹೋದಸಲವೂ ಕೂಡ ಆಕ್ಚುಯಲ್ ಟೆನೆಂಟ್ಸ್ ನಾಲ್ಕು ಲಕ್ಷ ಅಥವಾ ಮೂರೂವರೆ ಲಕ್ಷ ಇದ್ದರೆ ಎಂಟು-ಒಂಭತ್ತು ಲಕ್ಷದ ಮೇಲೆ ಟೆನೆನ್ಸಿ ಅಪ್ಲಿಕೇಷನ್‌ಗಳು ಬಂದಿದ್ದವು. ಅದರಲ್ಲಿ ಎಷ್ಟೋ ಅರ್ಜಿಗಳು ರಿಜೆಕ್ಟ್ ಆದವು. 50 ಪರ್ಸೆಂಟ್ ಅಷ್ಟು ರಿಜೆಕ್ಟ್ ಆದವು. ಹಾಗೆಯೇ ಈಗಲೂ ಕೂಡ ಸಾಧ್ಯತೆ ಇದೆ. ಅದೇ ರೀತಿ ಅನೇಕ ಬೋಗಸ್ ಅರ್ಜಿಗಳು ಬರುತ್ತವೆ. ಏಕೆಂದರೆ ಹಳ್ಳಿಯಲ್ಲಿ ಏನಾದರೂ ಮಾಡಿ ಅದನ್ನು ಡಿಸ್‌ಪೊಸೆಸ್ ಮಾಡಬೇಕು, ವ್ಯಾಜ್ಯ ತಂದಿಟ್ಟರೆ ಬೇಸತ್ತು ಆ ಟೆನೆಂಟ್ ಬಿಡುತ್ತಾನೆ, ಆ ಬಡವನು ಬಿಡುತ್ತಾನೆ ಎನ್ನುವ ದೃಷ್ಟಿಯಿಂದ ಮಾಡುತ್ತಾರೆ. ಅದಕ್ಕೆ ಪ್ರೋತ್ಸಾಹ ಕೊಡುವ ಅಧಿಕಾರಿಗಳು ಅಲ್ಲಿದ್ದರೆ ಸ್ಪೆಷಲ್ ಡೆಪ್ಯುಟಿ ಕಮೀಷನರನ್ನು ನೀವು ಹಾಕಿದರೆ ಖಂಡಿತವಾಗಿ ಅವರು ಉದ್ಧಾರವಾಗುವುದಿಲ್ಲ. ಆದಕ್ಕೆ ದಯವಿಟ್ಟು ಅಧಿಕಾರಿಗಳು ಒಳ್ಳೆಯವರೂ ಇರಬೇಕು ಮತ್ತು ಡೇಟ್ ಎಕ್ಸ್‌ಟೆಂಡ್ ಏನು ಮಾಡುತ್ತೀರಿ, ಇದಕ್ಕೆ ಏನು ಅಪ್ಲಿಕೇಷನ್ಸ್ ಕಾಲ್‌ಫಾರ್ ಮಾಡುತ್ತೀರಿ, ಅದರ ದುರುಪಯೋಗವನ್ನು ಕೂಡ ಬೇರೆಯವರು ಪಡೆದುಕೊಳ್ಳಬಾರದು. ಅದನ್ನು ಕೂಡ ತಾವು ನೋಡಬೇಕು. ಇನ್ನೊಂದು ಮಾತನ್ನು ಹೇಳಬೇಕಾಗುತ್ತದೆ. ಈಗೇನೊ ಸೆಕ್ಷನ್ 77(ಎ)ಗೆ ಮಾತ್ರ ತಿದ್ದುಪಡಿಯನ್ನು ತಂದು ನೀವೇನೊ ಸಹಾಯ ಮಾಡುತ್ತೇವೆ ಎಂದು ಹೊರಟಿದ್ದೀರಿ. ಈ ಒಂದು ಕಾನೂನನ್ನು ತರುವುದಕ್ಕೆ ಕಾರಣಕರ್ತರಾದ ಶ್ರೀಮಾನ್ ದೇವರಾಜಅರಸ್‌ರವರು ಒರಿಜಿನಲ್ ಆಕ್ಟ್ ಏನು ಇತ್ತು, ಅದನ್ನು ತಿರುಚುಮುರುಚು ಮಾಡಿಬಿಟ್ಟರು. ಇದನ್ನು ನಾನು ಬಹಳ ಕಳಕಳಿಯಿಂದ ಹೇಳುತ್ತಿದ್ದೇನೆ. ನೀವು ಸೀಲಿಂಗ್ ಲಿಮಿಟ್ ಎನ್‌ಹ್ಯಾನ್ಸ್ ಮಾಡಿ ಇಂಡಸ್ಟ್ರಿ ಹೆಸರಿನಲ್ಲಿ, ಅಥವಾ ಬೇರೆ ಪ್ರೈವೇಟ್ ಎಜುಕೇಷನಲ್ ಇನ್ಸ್‌ಟಿಟ್ಯೂಷನಲ್ ಹೆಸರಿನಲ್ಲಿ, ಆಸ್ಪತ್ರೆ ಹೆಸರಿನ ಮೇಲೆ, ಹಾರ್ಟಿಕಲ್ಚರ್ ಹೆಸರಿನಮೇಲೆ ಮಾಡಿ ಇವತ್ತು ಸೀಲಿಂಗನ್ನು ತಾವೇನು ಎನ್‌ಹ್ಯಾನ್ಸ್ ಮಾಡಿದಿರಿ ಹೋದ ಭೂಸುಧಾರಣೆ ಕಾನೂನಿನಲ್ಲಿ, ಅದರಿಂದ ಎಸ್ಟೇಟ್ ಏಜೆಂಟ್ಸ್ ಅಷ್ಟೇ ಅಲ್ಲ, ದೊಡ್ಡ ದೊಡ್ಡ

ಇಂಡಸ್ಟ್ರಿಯಲಿಸ್ಟ್, ಆ ಒಂದು ಇಂಡಸ್ಟ್ರಿ ಹೆಸರಿನಮೇಲೆ, ಹಾರ್ಟಿಕಲ್ಚರ್ ಹೆಸರಿನಮೇಲೆ, ಅಗ್ರಿಕಲ್ಚರ್ ಫಾರಂ ಸೀಡಿನ ಹೆಸರಿನಲ್ಲಿ ಇವತ್ತು ನೂರಾರು ಎಕರೆ ಜಮೀನನ್ನು ಪಡೆದುಕೊಂಡಿದ್ದಾರೆ. ಯಾವುದು ನಾವು ಸೀಲಿಂಗ್ ಇಟ್ಟು ದೊಡ್ಡ ದೊಡ್ಡ ಭೂಮಾಲೀಕರಿಗೆ ನಾವು ಆ ಭೂಮಾಲೀಕತ್ವವನ್ನು ತಪ್ಪಿಸಬೇಕೆನ್ನುವ ಉದ್ದೇಶದಿಂದ ಕಾನೂನನ್ನು ತಂದಿದ್ದೇವೆ, ಪುನಃ ಆ ಒಂದು ಸಂಪತ್ತು ಇರುವವರಿಗೆ, ಹಣ ಇರುವವರಿಗೆ ಪುನಃ ಜಮೀನು ಹೋಗುವುದು ಆಯಿತು. ಒನ್ ಮ್ಯಾನ್ ಒನ್ ಪ್ರೊಫೆಸನ್ ಥಿಯರಿ ಮುಗಿದುಹೋಯಿತು. ಶ್ರೀಮಂತರಿಗೆ ಜಮೀನು ಹೋಗುತ್ತಾ ಇದೆ. ಟೆನೆಂಟ್‌ಗಳ ಪ್ರಶ್ನೆಯೇ ಇವತ್ತು ಬರುವುದಿಲ್ಲ. ಅದನ್ನು ಕೂಡ ಏಕೆಂದರೆ further tenancy cannot be created. ಇವತ್ತು ಅವರು ಜಮೀನುಗಳನ್ನು ತೆಗೆದುಕೊಂಡು ಪುನಃ ಬೇರೆಯವರಿಗೆ ಅಲ್ಲಿ ಬೇನಾಮಿ ಹಚ್ಚಿ ಕಲ್ಟಿವೇಟ್ ಮಾಡುವುದು ಇವತ್ತು ನಡೆದಿದೆ. ಈಗಲಾದರೂ ಕನಿಷ್ಟ ಇದರ ಪ್ರಯೋಜನ ತಿಳಿದುಕೊಂಡ ಮೇಲೆ ಪುನಃ ಅದಕ್ಕೆ ತಿದ್ದುಪಡಿಯನ್ನು ತಂದು ಅಟ್‌ಲೀಸ್ಟ್ ಇಲ್ಲಿ ಒಂದು ಸೀಲಿಂಗನ್ನು ನಾವು ಏನು ಹಾಕಿದ್ದೇವೆ, ಆ ಸೀಲಿಂಗ್‌ನ ಒಳಗಡೆಯೇ ಇರುವ ಪ್ರಯತ್ನವನ್ನು ಇವರು ಮಾಡುತ್ತಾರೆ ಎಂದು ನಾನು ತಿಳಿದುಕೊಂಡಿದ್ದೇನೆ. ಅದಕ್ಕೆ ಭೂಸುಧಾರಣೆ ಕಾನೂನನ್ನು ಯಾವ ಉದ್ದೇಶದಿಂದ ತಂದಿತ್ತೋ, ಈ ಸರ್ಕಾರವಂತೂ ಆ ಉದ್ದೇಶ ಆ ಕಾನೂನನ್ನು ವಿಫಲಗೊಳಿಸುವುದರಲ್ಲಿ ಅಥವಾ ಕಾನೂನಿನ ಸ್ಪಿರಿಟ್ ಏನಿತ್ತು, ಕಂಪ್ಲೀಟ್‌ಲಿ ಇವತ್ತಿನದಿವಸ ಆ ಸ್ಪಿರಿಟ್ಟನ್ನೊಡೆದು ಹಾಕಿ ಕೇವಲ ನಾಮಕಾವಸ್ಥೆ ಸ್ಕೆಲಿಟನ್ ಆಗಿ ಇವತ್ತು ಭೂ ಸುಧಾರಣೆ ಕಾನೂನನ್ನು ಇಟ್ಟಿದ್ದಾರೆ. ಇದರ ಜೊತೆಯಲ್ಲಿ ಇನ್ನೊಂದು ಅವರಲ್ಲಿ ನಾನು ಮನವಿ ಮಾಡಿಕೊಳ್ಳುತ್ತೇನೆ, ಸರ್‌ಪ್ಲಸ್ ಭೂಮಿ ಇವತ್ತು ಸಾಕಷ್ಟು ಇದೆ. ಅದು ಕೋರ್ಟಿನಲ್ಲಿ ಕೆಲವು ಅರ್ಜಿಗಳನ್ನು ಒಂದು ಸಾರಿ ಹಾಕಿದ್ದಾರೆ. ನಮ್ಮ ಸರ್ಕಾರಿ ವಕೀಲರು ಕೂಡ ಅದನ್ನು ವೆಕೇಟ್ ಮಾಡಿಸಲಿಕ್ಕೆ ಪರ್‌ಸ್ಯೂ ಮಾಡುವುದಿಲ್ಲ. ಯಾವುದೋ ಒಂದು ಕೇಸ್ ಹೈಕೋರ್ಟಿಗೆ ಬಂದರೆ ಅಥವಾ ಸುಪ್ರೀಂಕೋರ್ಟಿಗೆ ಹೋದರೆ ನಮ್ಮ ಪರವಾಗಿ ವಕಾಲತ್ತು ಮಾಡುವ ಸರ್ಕಾರಿ ವಕೀಲರು ಕೂಡ ಆಸಕ್ತಿವಹಿಸುವುದಿಲ್ಲ. ಸ್ಟೇ ವೆಕೇಟ್ ಮಾಡಿಸುವುದಿಲ್ಲ. ಹೀಗಾಗಿ ಇವತ್ತು ಲಕ್ಷಾಂತರ ಎಕರೆ ಭೂಮಿಯನ್ನು ವಿಶೇಷವಾಗಿ ಉತ್ತರ ಕರ್ನಾಟಕದಲ್ಲಿ ಮತ್ತು ಎಲ್ಲಿ ನೀರಾವರಿಯಾಗಿದೆ, ಮೊದಲು ಡ್ರೈ ಲ್ಯಾಂಡ್ ಇತ್ತು. ಅಧ್ಯಕ್ಷರೇ, ತಾವು ಕೇಳುತ್ತಿದ್ದೀರಿ ಎಂದುಕೊಂಡಿದ್ದೇನೆ. ಮೊದಲು ಡ್ರೈಲ್ಯಾಂಡ್ ಇತ್ತು. ಈಗ ಯುಕೆಪಿ ಬಂತು. ಮಲಪ್ರಭ ಬಂತು. ಘಟಪ್ರಭಾ ಬಂತು. ಅಥವಾ ಕಾವೇರಿ ಬೇಸಿನ್‌ನಲ್ಲಿ ನನಗೆ 54 ಎಕರೆ ಇದ್ದಾಗ ಇವತ್ತಿನ ದಿವಸ ಅದು ನೀರಾವರಿಯಾದರೆ ನಿಮ್ಮ ಸೀಲಿಂಗ್‌ನಲ್ಲಿ ಅಪ್ಲಿಕಬಲ್ ಆಗುತ್ತದೆ. ಅದರ ಕಡೆಗೆ ಒಬ್ಬರದ್ದೂ ಲಕ್ಷ್ಯ ಇಲ್ಲ. ಮೊದಲು ಅಧಿಕಾರಿಯದು ಲಕ್ಷ್ಯ ಇಲ್ಲ, ಸರ್ಕಾರದ್ದೂ ಲಕ್ಷ್ಯ ಇಲ್ಲ, ಬೇರೆಯವರದ್ದೂ ಲಕ್ಷ್ಯ ಇಲ್ಲ. 400, 500, 600 ಎಕರೆ ಇದ್ದರೂ ಕೂಡ ಇವತ್ತು ನೀರಾವರಿ ಇದ್ದರೆ ಹಿಂದೆ ಅವರು ಡ್ರೈ ಲ್ಯಾಂಡ್ ಎಂದು ಹೇಳಿ ಏನು ಡಿಕ್ಲರೇಷನ್ ಕೊಟ್ಟಿದ್ದ, 30 ವರ್ಷಗಳ ಹಿಂದೆ ಅಥವಾ 25 ವರ್ಷಗಳ ಹಿಂದೆ, ಅದೇ ಡಿಕ್ಲರೇಷನ್ ಅನ್ನು ಖಾಯಂಗೊಳಿಸಿಕೊಂಡು ಇವತ್ತು 200, 300 ಎಕರೆ ನೀರಾವರಿ ಜಮೀನು ಅವರ ವಶದಲ್ಲಿದೆ. ಏನ್‌ಕ್ವೈರಿನೂ ಇಲ್ಲ, ಯಾರೂ ಕೂಡ ನೋಡಿಲ್ಲ. ಮತ್ತೆ ಇದು ವರ್ಷೆ ವರ್ಷೇ ಹೆಚ್ಚಿಗೆ ಆಗತಕ್ಕ ಕೇಸ್‌ಗಳು. ಎಷ್ಟು ನೀರಾವರಿ ಹೆಚ್ಚಿಗೆ ಆಗುತ್ತದೆ? ಅದು ಯಾವುದೇ ಯೋಜನೆಯ ಕೆಳಗಡೆ ಇರಬಹುದು. ಅಪ್ಪರ್ ಕೃಷ್ಣಾ ಪ್ರಾಜೆಕ್ಟ್‌ಗಳಿಗೆ ಇರಬಹುದು, ಘಟಪ್ರಭಾ, ಮಲಪ್ರಭಾ ಕೆಳಗೆ ಇರಬಹುದು, ಕಾವೇರಿ ಕೆಳಗೆ ಇರಬಹುದು.

ಯಾವುದೇ ಒಂದು ಯೋಜನೆಯ ಕೆಳಗಡೆ ಇರಬಹುದು. ಆದರೆ ನಮ್ಮ ಭೂ ಸುಧಾರಣಾ ಕಾಯಿದೆಯಲ್ಲಿರತಕ್ಕ ಸೀಲಿಂಗ್ ಮತ್ತು ಅದು ಪ್ರಾಜೆಕ್ಟ್ ಕಂಪ್ಲೀಟ್ ಆದ ಮೇಲೆ ಯಾವ್ಯಾವ ಸರ್ವೆ ನಂಬರ್‌ಗೆ ನೀರುಹೋಗಿದೆ, ಅಲ್ಲಿ ಅವರ ಹತ್ತಿರ ಎಷ್ಟು ಎಕ್ಸೆಟೆಂಟ್ ಜಮೀನು ವಶದಲ್ಲಿದೆ, ಅದನ್ನು ಡಿಕ್ಲರೇಷನ್ ಮುಖಾಂತರ ತೆಗೆದುಕೊಂಡು ಸರ್‌ಪ್ಲಸ್ ಎಂದು ಹೇಳಿ ಅದನ್ನು ಡಿಕ್ಲೇರ್ ಮಾಡಿಕೊಂಡು ಹಂಚತಕ್ಕ ವ್ಯವಸ್ಥೆ ಆಗಬೇಕು. ಅದು ಆಗುತ್ತಿಲ್ಲ. ಅದಕ್ಕೆ ಸರ್ಕಾರ ಇದನ್ನು ರಿವ್ಯೂ ಮಾಡಿದೆಯೇ? ಈ ಎರಡು ಮೂರು ವರ್ಷದಲ್ಲಿ ಎಷ್ಟು ಎಕರೆ ಜಮೀನು ಇಂತಹದ್ದು ಇದೆ ಎಂದು ಏನಾದರೂ ನೋಡಿದ್ದಾರಾ? ಅಥವಾ ಇಲಾಖೆಯವರು ಯಾರಾದರೂ ಇದರ ಕಡೆಗೆ ಮನಸ್ಸು ಹರಿಸಿ, ಅಥವಾ ಲಕ್ಷ್ಯವಿಟ್ಟು ಏನಾದರೂ ಇದರ ಬಗ್ಗೆ ಚಿಂತನೆ ಮಾಡಿದೆಯಾ ಎನ್ನತಕ್ಕದ್ದು ಬಹಳ ಮುಖ್ಯ. ಜಮೀನು ಅಂತೂ ಹೊಸದಾಗಿ ತರುವುದಕ್ಕೆ ಆಗುವುದಿಲ್ಲ. ಇನ್ನೂ ಆಹಾರಧಾನ್ಯ ಉತ್ಪಾದನೆ ಮಾಡಬಹುದು, ಅಥವಾ ಯಾವುದು ಪ್ರೊಡಕ್ಟೀವ್ ಕೆಲಸ ಇದೆ, ಹೆಚ್ಚಿನ ಪ್ರೊಡಕ್ಷನ್ ಮಾಡಬಹುದು. ಆದರೆ ಜಮೀನು ಹೆಚ್ಚಿಗೆ ತರುವುದಕ್ಕೆ ಆಗುವುದಿಲ್ಲ. ಅಥವಾ ವಿಸ್ತಾರ ಮಾಡುವುದಕ್ಕೆ ಆಗುವುದಿಲ್ಲ. ಇರತಕ್ಕ ಜಮೀನಿನಲ್ಲಿ ನಾವು ವ್ಯವಸ್ಥಿತವಾಗಿ ಇದನ್ನು ಉಪಯೋಗ ಮಾಡಿಕೊಳ್ಳಬೇಕು. ವ್ಯವಸ್ಥಿತವಾಗಿ ಇದರ ಒಂದು ಯುಟಿಲಿಟಿ ಆಗತಕ್ಕ, ಉಪಯುಕ್ತತೆ ಮಾಡಿಕೊಳ್ಳುವ ದೃಷ್ಟಿಯಿಂದಲೇ ಇವತ್ತು ಭೂ ಸುಧಾರಣಾ ಕಾನೂನು ತಂದಿದ್ದೇವೆ. ಅದಕ್ಕೆ ಈ ಭೂ ಸುಧಾರಣಾ ಕಾನೂನಿನ ಸ್ಪಿರಿಟ್ ತಿಳಿದುಕೊಂಡು ಈ ಸರ್‌ಪ್ಲಸ್ ಜಮೀನು ಏನು ಇದೆ, ಅದರ ಬಗ್ಗೆ ಕೂಡ ತಾವು ಚಿಂತನೆ ಮಾಡಬೇಕು ಎನ್ನತಕ್ಕ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಮೂರ್‍ನಾಲ್ಕು ಸಲಹೆ ನಾನೇನು ಕೊಟ್ಟಿದ್ದೇನೆ, ದಯವಿಟ್ಟು ಅದಕ್ಕೆ ಲಕ್ಷ್ಯ ಕೊಡುತ್ತಾರೆ ಎನ್ನತಕ್ಕದ್ದನ್ನು ನಾನು ಕೇಳಿಕೊಳ್ಳುತ್ತೇನೆ. ಏಕೆಂದರೆ ಇದಕ್ಕೆ ಸಂಬಂಧಪಟ್ಟಿದ್ದು ಇಲ್ಲದೇ ಇದ್ದರೂ ಕೂಡ ಬಹಳ ಮಹತ್ವವಾದಂತಹ ವಿಷಯ ಇದೆ. ಅದಕ್ಕೆ ಅವರು ಇದರ ಮೇಲೆ ಕೂಡ ಚಿಂತನೆ ಮಾಡುತ್ತಾರೆಂದು ಕೇಳಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಎಲ್ಲ ಮಾನ್ಯ ಸದಸ್ಯರಲ್ಲಿ ಒಂದು ವಿನಂತಿ. ಅಮೆಂಡ್‌ಮೆಂಟ್ಸ್ ಮೇಲೆ ಮಾತನಾಡುವಾಗ ರಿಪಿಟೀಷನ್ ಅವಾಯ್ಡ್ ಮಾಡಬೇಕು. ಅಮೆಂಡ್‌ಮೆಂಟ್ಸ್ ಏನಾದರೂ ಸಜೆಸ್ಟ್ ಮಾಡುವ ಹಾಗಿದ್ದರೆ ಮಾಡಿ. ಆದಷ್ಟು ರಿಪಿಟೀಷನ್ ಬೇಡ.

ಶ್ರೀ ಬಿ.ಎಸ್. ಯಡಿಯೂರಪ್ಪ : ಯಾರು ಸುಪ್ರೀಂ ಕೋರ್ಟಿಗೆಲ್ಲಾ ಹೋಗಿ ಎಲ್ಲ ವಜಾ ಆಗಿರುವುದನ್ನು ಮತ್ತೆ ಹಿಂಬಾಗಿಲಿನಿಂದ ದಾನ ಮಾಡುವುದಕ್ಕೆ ಹೋಗಿರುವಂತಹ ಬಿಲ್ ಇದು. ಗಂಟೆಗಟ್ಟಲೆ ಅಲ್ಲ, ದಿವಸಗಟ್ಟಗಲೇ ಚರ್ಚೆ ಮಾಡಿದರೂ ಇವರು ಏನು ಮಾಡುವುದಕ್ಕೆ ಹೋಗಿದ್ದಾರೆ? ಇಡೀ ಸರ್ಕಾರಿ ಜಮೀನೆಲ್ಲಾ ಯಾರಿಗೋ ದಾನ ಮಾಡಲಿಕ್ಕೆ ಹೊರಟಿದ್ದಾರಾ ಎಂದು ಅನುಮಾನ ಬರುವಂತಹ ಈ ಒಂದು ವಿಚಿತ್ರವಾದಂತಹ ಬಿಲ್. ಅದಕ್ಕೋಸ್ಕರ ಪ್ರಮೀಳಾ ಅವರು ಮಾತನಾಡಿದ ಮೇಲೆ, ಯಾವುದೂ ರಿಪೀಟ್ ಆಗುವ ಪ್ರಶ್ನೆ ಇಲ್ಲ. ಇದನ್ನು ಏಕೆ ಈ ಗಳಿಗೆಯಲ್ಲಿ ಇವರು ತಂದಿಟ್ಟಿದ್ದಾರೆ ಎಂದು ನಮಗೆ ಅರ್ಥ ಆಗದೇ ಇರುವಂತಹ ಸಂಗತಿ.

ಅಧ್ಯಕ್ಷರು : ಸರ್ಕಾರದ ಜಮೀನು ಅಲ್ಲ, ಪ್ರಮೀಳಾ ಅವರು ರಿಪೀಟ್ ಮಾಡುತ್ತಾರೆಂದು ನಾನು ಹೇಳಲಿಲ್ಲ. ನಾನು ಎಲ್ಲ ಮೆಂಬರ್ಸ್‌ಗೆ ಒಂದು ಸಜೆಷನ್ ಕೊಟ್ಟು ಬಿಲ್ ಇಂಟ್ರಡ್ಯೂಸ್ ಮಾಡಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅಮೆಂಡ್‌ಮೆಂಟ್ಸ್ ಮುಂದೆ ಬರುತ್ತವೆ. ಕಾನೂನಿಗೆ ಅನುಗುಣವಾಗಿಯೇ ಮಾತನಾಡಬೇಕಾಗುತ್ತದೆ. ಏಕೆಂದರೆ ಈ ಭೂ ಸುಧಾರಣೆ ನೀವು ಹಿಂದೆ ತಂದಿದ್ದು ಸರಿಯಿಲ್ಲ ಎಂದು ಈ ಸಂದರ್ಭದಲ್ಲಿ ಹೇಳಲಿಲ್ಲ ಎಂದರೆ ಮತ್ತೆ ಯಾವುದೋ ಒಂದು ಕಾನೂನು ತಂದಾಗ ಹೇಳುವುದಕ್ಕೆ ಆಗುವುದಿಲ್ಲ. ಡಿಮ್ಯಾಂಡ್ ಮೇಲೆ ಎಲ್ಲಿ ಮಾತನಾಡುವುದಕ್ಕೆ ಆಗುತ್ತದೆ?

ಅಧ್ಯಕ್ಷರು : ವ್ಯಾಲಿಡ್ ಆಗಿ ಮಾಡೋಣ. ಒಂದು ವೇಳೆ ನಿಮಗೆ ಮಾತನಾಡಲು ಬಹಳ ವಿಚಾರ ಇದೆ ಎಂದರೆ ನಾನೇನು ನಿಮ್ಮ ಹಕ್ಕನ್ನು ಮೊಟಕುಗೊಳಿಸಲು ಹೋಗುವುದಿಲ್ಲ.

+ ಶ್ರೀಮತಿ ಪ್ರಮೀಳಾ ನೇಸರ್ಗಿ : ಸನ್ಮಾನ್ಯ ಸಭಾಧ್ಯಕ್ಷರೆ, ಈ ಬಿಲ್ಲನ್ನು ಯಾವ ಕಾರಣಕ್ಕೋಸ್ಕರ ತಂದಿದ್ದಾರೆ ಎಂದು ನನಗಂತೂ ಅರ್ಥ ಆಗಲಿಲ್ಲ. ಈಗ 1.6.1979ಕ್ಕೆ ಟೈಮ್ ಎಕ್ಸ್‌ಪೈರ್ ಆಯಿತು. 1.3.1974ರಲ್ಲಿ ಯಾರು ಪೊಸೆಷನ್‌ನಲ್ಲಿದ್ದರೋ ಅವರು ಅಪ್ಲಿಕೇಷನ್ ಹಾಕಬೇಕು ಎಂದು ಕಾನೂನು ಇತ್ತು. ಆಮೇಲೆ ಕಾಲಾನಂತರ ಎಕ್ಸ್‌ಟೆಂಡ್ ಮಾಡಿಕೊಳ್ಳುತ್ತಾ ಬಂದರು. ಕೊನೆಗೆ 1.6.79ಕ್ಕೆ ಸಮಯ ಮುಗಿಯಿತು. ಸಾವಿರಾರು ಅಪ್ಲಿಕೇಶನ್ಸ್ 1.6.79ರ ನಂತರ ಲ್ಯಾಂಡ್ ಟ್ರಿಬ್ಯೂನಲ್‌ಗೆ ಜನಗಳು ಹಾಕಿದ್ದರು. ಆ ಅಪ್ಲಿಕೇಶನ್ಸ್ ಎಲ್ಲಾ ಲ್ಯಾಂಡ್ ಟ್ರಿಬ್ಯೂನಲ್‌ನಲ್ಲಿ ಇವತ್ತು ವಜಾ ಆಗಿದೆ. ಹೈಕೋರ್ಟ್‌ನಲ್ಲೂ ವಜಾ ಆಗಿದೆ. ಸುಪ್ರೀಂ ಕೋರ್ಟಿನಲ್ಲಿ ಅದು ಕನ್‌ಫರ್ಮ್ ಆಗಿದೆ. ನೀವು ಇಲ್ಲಿ ಏನಾದರೂ ಒಂದು ಪ್ರಾವಿಜನ್ ಮಾಡಿ. "Notwithstanding the order passed by the Land Tribunal, High Court and the Supreme Court" ಆ ಬಗ್ಗೆ ಕಾನೂನು ತರಲಿಕ್ಕೆ ಏನಾದರೂ ಪ್ರಯತ್ನ ಮಾಡಿದ್ದೀರೋ? ಖಂಡಿತವಾಗಿಯೂ ಮಾಡಿಲ್ಲ. ಸಿವಿಲ್ ಕೋರ್ಟಿನಲ್ಲಿ ಕನ್‌ಫರ್ಮ್‌ಆಗಿದೆ. ನಿಮ್ಮದು ಏನು ಉದ್ದೇಶ? ಯಾರು 1.3.1974ರಲ್ಲಿ ಕಂಟಿನ್ಯುಯಸ್‌ಲಿ ಇವತ್ತು ಪೊಸೆಷನಲ್ಲಿದ್ದರೋ ಅವರಿಗೆ ಕೊಡಬೇಕು ಎಂದು ಹೇಳಿದ್ದೀರಿ. ಅದೇ ಉದ್ದೇಶ ಆಗಿದ್ದರೆ ಲ್ಯಾಂಡ್ ಗ್ರಾಂಟ್ಸ್ ರೂಲ್ಸ್‌ನಲ್ಲಿ ನೀವು ಮಾಡಿಕೊಳ್ಳಬಹುದಾಗಿತ್ತು. ಲ್ಯಾಂಡ್ ಟ್ರಿಬ್ಯೂನಲ್‌ಗೆ ಲ್ಯಾಂಡ್ ರಿಫಾರ್ಮ್ಸ್ ಆಕ್ಟ್ ಅಮೆಂಡ್‌ಮೆಂಟ್ ಬೇಕಾಗಿಲ್ಲ. Under Section 44 land vests in the Government.

MR. SPEAKER : Land Grant Rules can be made applicable if the transaction is between the person on the land and the land belongs to the Government. Here they are tenants.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಲ್ಯಾಂಡ್ ಗ್ರಾಂಟ್ ರೂಲ್ಸ್‌ನಲ್ಲಿ ಕೂಡ the conditions are there; 50% should be given to SC: 50% should be given to others and so on. But here the tenant and the land-lord relationship. Here the landlord is absent. In the absence of the land-lord the Government has come. So when the Government has come to grant it, this amendment is necessary.

ಅಧ್ಯಕ್ಷರ : ಇದು ಫಾರ್ಮ 7 ಫೈಲ್ ಮಾಡಲಿಕ್ಕೆ ಏನು ಲಾಸ್ಟ್ ಡೇಟ್ ಸ್ಪೆಸಿಫೈ ಮಾಡಿದ್ದರು ಟೆನೆಂಟ್ಸ್‌ಗೆ ಅದರ ಎಕ್ಸ್‌ಟೆನ್‌ಷನ್- ಅಷ್ಟೇ.

ಶ್ರೀಮತಿ ಪ್ರಮೀಳಾ ನೇಸರ್ಗಿ : ಅದು 1979ರಲ್ಲಿ ಕೊನೆ ಆಯಿತು. 20 ವರ್ಷ ಆದ ನಂತರ ನಿಮಗೆ ಜ್ಞಾನೋದಯ ಆಯಿತಾ? 1974ರಲ್ಲಿ ಕಾನೂನು ತಂದಿದ್ದು ಈಗ 1998ನಲ್ಲಿ ತಂದಿದ್ದೀರಿ. 25 ವರ್ಷ ಆಗಿದೆ. ಲಾ ಆಫ್ ಅಡ್ವರ್ಸ್ ಪೊಸೆಷನ್ ಪ್ರಕಾರವಾಗಿ 12 ವರ್ಷ ಯಾರಾದರೂ ಅನ್ ಆಥರೈಸ್ಡ್ ಆಕ್ಯುಪೇಷನ್‌ನಲ್ಲಿದ್ದರೆ if it was a owners' land, ಸರ್ಕಾರೀ ಲ್ಯಾಂಡ್ ಎಂದು ಇಟ್ಟುಕೊಳ್ಳಿ. ಗವರ್ನಮೆಂಟ್ ಲ್ಯಾಂಡ್ ಎಂದರೆ ಜೂರಲ್ ರಿಲೇಷನ್‌ಶಿಪ್ ಬರುತ್ತದೆ. ಇದು ಸರ್ಕಾರದ ಲ್ಯಾಂಡ್ ಆದರೆ ಲ್ಯಾಂಡ್ ಗ್ರ್ಯಾಂಟ್ ಆಕ್ಟ್ ಪ್ರಕಾರ ಕೊಡಬಹುದು. ಅಥವಾ ನೀವು ಜೂರಲ್ ರಿಲೇಶನ್ ಶಿಪ್ ಇತ್ತು ಲ್ಯಾಂಡ್‌ಲಾರ್ಡ್ ಟೆನೆಂಟ್ ಇದ್ದ ಎಂದು ಹೇಳಿ 1974 ನೇ ಇಸವಿಯಿಂದ ಇವತ್ತಿನವರೆಗೆ ಕಂಟಿನ್ಯುಯಸ್ ಪೊಸೆಷನಲ್ಲಿ ಇದ್ದರೆ he becomes an owner on his own right. You need not give him. ಅನ್ ಆಥರೈಸ್ಡ್ ಆಕ್ಯುಪೇಷನ್‌ನಲ್ಲಿ openly, continuously, adversely ಈ ಬಗ್ಗೆ ಹೇಳುತ್ತೇನೆ. ಅಡ್ವರ್ಸ್ ಪೊಸೆಷನ್ ಯಾವಾಗ ಬರುತ್ತದೆ? ಇಲ್ಲೀಗಲ್ ಪರ್ಸನ್ ಆದಾಗ. 1974 ಪ್ರಕಾರ ವೆಸ್ಟ್ ಆದ ಮೇಲೆ it belongs to the Government.

SRI SIDDARAMAIAH : What about the tenant in adverse possession? You don't find the relationship between the land-lord and the tenant?

ಶ್ರೀಮತಿ ಪ್ರಮೀಳಾ ನೇಸರ್ಗಿ : 1.3.1974 ಅದಮೇಲೆ if the land is vested in the Government, it becomes a Gvoernment land.

ಅಧ್ಯಕ್ಷರು : ಈಗ ಅಡ್ವರ್ಸ್ ಪೊಸೆಷನ್ ಗ್ರ್ಯಾಂಟ್ ಮಾಡತಕ್ಕದ್ದು in case of private land, 33 years in case of Government land 25 years ಸುಪ್ರೀಂ ಕೋರ್ಟ್ ರೂಲಿಂಗ್ ಇದೆ, ಅದರ ಬಗ್ಗೆ ತಾವು ಹೇಳುತ್ತಿದ್ದೀರಿ. ಇದು ಅದಕ್ಕೆ ಅನ್ವಯಿಸುವುದೇ ಇಲ್ಲ. ನಾನು ತಮಗೆ ಏನು ಹೇಳುತ್ತೇನೆಂದರೆ ಅನೇಕ ಅವಕಾಶಗಳನ್ನು ಗೇಣಿದಾರರು ಆಗಿದ್ದಂತಹವರಿಗೆ ಸರ್ಕಾರ ನೀವು ಫಾರ್ಮ 7 ಹಾಕಿ ಎಂದು ಅವಕಾಶ ಕೊಟ್ಟಿತ್ತು. ಆ ಎಲ್ಲಾ ಕೊಟ್ಟ ಅವಕಾಶಗಳನ್ನು ಗೇಣಿದಾರರು ಉಪಯೋಗಿಸಿಕೊಳ್ಳಲಿಲ್ಲ. ಅವನಿಗೆ ಅಜ್ಞಾನವೋ ತಿಳುವಳಿಕೆ ಸಾಲಲಿಲ್ಲವೋ, ಧೈರ್ಯ ಸಾಲಲಿಲ್ಲವೋ ಕೊಡಲಿಲ್ಲ. ಅದಾದ ಮೇಲೆ ಯಾವುದೇ ಕಾರಣಕ್ಕೆ ಸರ್ಕಾರ ಅವಧಿಯನ್ನು ಮುಂದುವರಿಸಲಿಲ್ಲ. ಅಂತಹ ಗೇಣಿದಾರರ ಸಂಖ್ಯೆ ಬಹಳ ಇದ್ದುದನ್ನು ಸರ್ಕಾರ ಗಮನಿಸಿ ಅವರ ಹಿತವನ್ನು ರಕ್ಷಣೆ ಮಾಡಲು ಈ ತಿದ್ದುಪಡಿಯನ್ನು ತಂದಿದ್ದಾರೆ.

ಶ್ರೀಮತಿ ಪ್ರಮೀಳಾ ನೇಸರ್ಗಿ : ನಾನು ಒಂದು ಪ್ರಶ್ನೆಯನ್ನು ಕೇಳುತ್ತೇನೆ, ಅವರು ಉತ್ತರ ಹೇಳಲಿ 1.3.1974ರಲ್ಲಿ ಅರ್ಜಿ ಹಾಕಲಿಲ್ಲ. ಅಂತಹವರಿಗೆ ಅವಕಾಶ ಮಾಡುತ್ತೇವೆ ಎಂದು ತಾವು ಹೇಳಿದ್ದೀರಿ. ಅದಾದನಂತರ 1.6.79ರ ನಂತರ ಸಹಸ್ರಾರು ಜನ ಅರ್ಜಿ ಹಾಕಿ ಅವರ ಅಪ್ಲಿಕೇಷನ್

ವಜಾ ಆಗಿ ಸುಪ್ರೀಂ ಕೋರ್ಟಿನಲ್ಲಿ ಕನ್‌ಫರ್ಮ್ ಆಗಿದೆ. ಏನು ಮಾಡುತ್ತಾರೆಂದು ಹೇಳಲಿ. ನಾನು ಕೇಳುತ್ತಿದ್ದೇನೆ. ಅವರೆಲ್ಲಾ ಆ ಜಮೀನುಗಳನ್ನು ಮಾರಿದ್ದಾರೆ. ಲ್ಯಾಂಡ್ ಲಾರ್ಡ್ ಅವೆಲ್ಲಾ ಮಾಡಿಲ್ಲ, ಫಾರ್ಮ್ 7 ಹಾಕಿಲ್ಲ ಎಂದು ಹೇಳಿ ಲ್ಯಾಂಡ್ ಲಾರ್ಡ್ ಕಡೆಗೆ ಆಗಿರತಕ್ಕಂಥ ಕೆಲವು ಜಡ್ಜ್‌ಮೆಂಟ್‌ಗಳು ಇದ್ದಾವೆ. ಅಥವಾ ಸರ್ಕಾರದ ಪರವಾಗಿ 1.3.1974ರಲ್ಲಿ ವೆಸ್ಟ್ ಆಗಿದೆ ಎಂದು ಹೇಳಿ ಸರ್ಕಾರದ ಸುಪರ್ದಿಗೆ ತೆಗೆದುಕೊಂಡಿರತಕ್ಕ ಜಮೀನುಗಳೂ ಇದ್ದಾವೆ. ನೀವು ಇದನ್ನು ಎಲ್ಲಿ ಹೇಳಿದ್ದೀರಿ? Notwithstanding any order passed by the High Court or the Supreme Court?

MR. SPEAKER : Is it a State law or not? In this House competent and empowered to enact this law or not? When was this land reforms law earlier passed and who passed it? Was it not the jurisdiction or this House? Doesn't this House have jurisdiction to effect any amendments to the law earlier passed by the same House?

ಶ್ರೀ ಬಿ. ಸೋಮಶೇಖರ್ : ತಾವು ಮಿಸ್ಟೇಕ್ ಮಾಡಿಕೊಂಡಿದ್ದೀರಿ. ಒಂದೇ ಕ್ಲಾರಿಫಿಕೇಶನ್. ನಾವು ತರುತ್ತಿರತಕ್ಕ ಅಮೆಂಡ್‌ಮೆಂಟ್ ಯಾವುದು ಎಂದರೆ ಯಾರು ಗೇಣಿದಾರರು ಪೊಸೆಷನ್‌ನಲ್ಲಿದ್ದಾರೆ, ಆದರೆ ವಾಸ್ತವಿಕವಾಗಿ ಪೊಸೆಷನ್‌ನಲ್ಲಿದ್ದಾರೆ. ಆದರೆ ಕೆಲವು ಕಾರಣಾಂತರದಿಂದ ಅವರು ಫಾರ್ಮ್ ನಂಬರ್ (7) ಹಾಕಿ ಅವರ ಹೆಸರಿಗೆ ಖಾತೆ ಮಾಡಿಕೊಳ್ಳುವುದಕ್ಕೆ ಆಗಲಿಲ್ಲ. ಅವರ ಹೆಸರಿಗೆ ಕನ್‌ಫರ್ಮೇಷನ್ ಆಗಿಲ್ಲ, ಅವರು ಅರ್ಜಿ ಹಾಕಿಲ್ಲ.

ಶ್ರೀ ಸಿದ್ದರಾಮಯ್ಯ : 1974ರ ಹಿಂದೆ ಸ್ವಾಧೀನದಲ್ಲಿದ್ದರು. ಅವರು ಫಾರ್ಮ್ ನಂಬರ್ 7 ಹಾಕದೇ ಇದ್ದಾರೆ. ಟೈಮ್ ಕೊಟ್ಟಿದ್ದರೂ ಹಾಕದೇ ಇದ್ದಾರೆ. 1974ರಿಂದ ಇವತ್ತಿನವರೆಗೆ ಕಂಟಿನ್ಯುಯಸ್ ಆಗಿ ಸ್ವಾಧೀನದಲ್ಲಿದ್ದರು. ಈ ತರಹ ಅನೇಕ ಕಂಪ್ಲೈಂಟ್‌ಗಳು ಸರ್ಕಾರಕ್ಕೆ ಬಂದಿದ್ದಾವೆ. ನಾವು ಉಳುವವನೇ ಭೂಮಿಯ ಒಡೆಯ ಎಂದು ಹೇಳುವಾಗ, ಆ ಪ್ರಿನ್ಸಿಪಲ್‌ಗೆ ನಾವು ಒಪ್ಪಿಕೊಂಡಿರುವಾಗ, ಅದನ್ನೇ ಬೇಸಿಕ್ ಪ್ರಿನ್ಸಿಪಲ್ ಆಗಿ ಇಟ್ಟುಕೊಂಡು ಲ್ಯಾಂಡ್ ರಿಫಾರ್ಮ್ಸ್ ಆಕ್ಟ್ ತಂದಿರುವಾಗ ಅವರಿಗೆ ಸಹಾಯ ಮಾಡಬೇಕು ಎನ್ನುವ ಕಾರಣಕ್ಕಾಗಿ ಈ ಒಂದು ತಿದ್ದುಪಡಿಯನ್ನು ತಂದಿರುವುದು.

11.50 ಎ.ಎಂ

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ನಾನು ಮಾತನಾಡತಕ್ಕ ಕಾಲದಲ್ಲಿ ಇಲ್ಲಿ ಎರಡು ಮೂರು ಬಿಲ್ಲುಗಳು ಇತ್ತು. ನಾವು ಇಂಥದ್ದನ್ನು ಮಾಡಿ ಎಂದು ಒತ್ತಾಯ ಮಾಡಿಕೊಂಡೇ ಬಂದಂಥವರು. ಯಾರಿಗೆ ಅಂದು ಅವಕಾಶ ಸಿಗಲಿಲ್ಲ. ಯಾವುದೋ ಬಲವಂತವಾದ ಕಾರಣಕ್ಕೆ ಸಿಕ್ಕಿದ್ದರೋ ಅವರಿಗೆ ಮತ್ತೊಮ್ಮೆ ಅವಕಾಶ ನೀಡುವುದನ್ನು ನಾವು ಸ್ವಾಗತಿಸುತ್ತೇವೆ. ಆದರೆ ಅದರ ಜೊತೆಗೆ ಕೆಲವು ಸಲಹೆಗಳನ್ನು ಕೊಡಬಯಸುತ್ತೇವೆ. ಆದ್ದರಿಂದ ದಾಖಲೆಯಲ್ಲೇನು ಹೋಗಿದೆ ಅದನ್ನು ನಾವು ಸರಿಪಡಿಸಿಕೊಳ್ಳುತ್ತೇವೆ.

ಶ್ರೀಮತಿ ಪ್ರಮೀಳಾ ನೇಸರ್ಗಿ : ನಮ್ಮ ನಾಯಕರು ಸ್ವಾಗತ ಮಾಡಿದ್ದನ್ನು ನಾನು ವಿರೋಧ ಮಾಡುತ್ತಿಲ್ಲ. ಆದರೆ ನಾನು ಏನು ಹೇಳುತ್ತಿದ್ದೇನೆಂದರೆ you have not made provision. 1.3.1974ರಿಂದ ಕೆಲವು ಕಾರಣಗಳಿಂದ ಏನಾದರು ಅರ್ಜಿಯನ್ನು ಹಾಕದಿದ್ದರೆ ಅವರಿಗೆ ಅವಕಾಶ ಮಾಡಿಕೊಡುವ ಉದ್ದೇಶದಿಂದ ಈ ಕಾನೂನನ್ನು ತಂದಿದ್ದೇವೆಂದು ಅವರು ಹೇಳುತ್ತಿದ್ದಾರೆ. ಅವರೇನು 1974ರ ನಂತರ ಅರ್ಜಿಯನ್ನು ಹಾಕಿಲ್ಲ ಅವರಲ್ಲಿ ಸಹಸ್ರಾರು ಜನರು 1979ರ ನಂತರ 1994ರವರೆಗೆ ಟ್ರಿಬ್ಯುನಲ್ ಮುಂದೆ ಅರ್ಜಿಯನ್ನು ಹಾಕಿದ್ದರು. ಅದು ವಜಾ ಆಯಿತು. ಹೈಕೋರ್ಟ್, ಸುಪ್ರೀಮ್ ಕೋರ್ಟ್‌ನಲ್ಲಿ ಕನ್‌ಫರ್ಮ್ ಆಯಿತು. ಅಂಥವರಿಗೆ ಏನು ಪ್ರಾವಿಜನ್ ಮಾಡಿದ್ದೀರಿ? "Notwithstanding the order passed by the Land Tribunal"

MR. SPEAKER : You mean those applications which were filed before the stipulated period.....

SMT. PRAMILA NESARGI : Beyond the period and before the Act came into force.

MR. SPEAKER : I will clarify. There are two categories. ಸರ್ಕಾರ ನಿಗದಿ ಮಾಡಿದ್ದ ಅವಧಿಯ ಒಳಗೆ ಲ್ಯಾಂಡ್ ಟ್ರಿಬ್ಯುನಲ್ ಮುಂದೆ ಅರ್ಜಿಯನ್ನು ಹಾಕಿಕೊಂಡು ಅಲ್ಲಿಂದ ಅದು ರಿಜೆಕ್ಟ್ ಆಗಿ ಸುಪ್ರೀಮ್ ಕೋರ್ಟ್‌ವರೆಗೆ ಹೋಗಿದ್ದು ಒಂದು ವಿಚಾರ. ಎರಡನೆಯದು, ನಿಗದಿಯಾದ ಸಮಯ ಆಗಿಹೋದ ನಂತರ ಅರ್ಜಿಯನ್ನು ಹಾಕಿಕೊಂಡು ನಿಗದಿಯಾದ ಸಮಯದಲ್ಲಿ ಅರ್ಜಿ ಸಲ್ಲಿಸಲಿಲ್ಲವೆಂದು ರಿಜೆಕ್ಟ್ ಆಗಿ ಅಲ್ಲಿಂದ ಸುಪ್ರೀಮ್‌ಕೋರ್ಟಿಗೆ ಹೋಗಿರುವವರಿಗೆ ತಾವೇನು ಮಾಡಿದ್ದೀರಿ ಎಂದು ತಮ್ಮ ಪ್ರಶ್ನೆಯಲ್ಲವೆ? ಏನಾಗುತ್ತದೆಂದರೆ I think the intention of the Government is, because there was no such amendment the had no other avenue. ಎಲ್ಲಾ ಕಡೆಗೂ ಹೋಗಿ ಬಂದಿದ್ದಾರೆ.

ಶ್ರೀ ಬಿ. ಸೋಮಶೇಖರ್ : ಮಾನ್ಯ ಅಧ್ಯಕ್ಷರೆ, ಯಾರು 1.3.74ರವರೆಗೆ ಟೆನೆಂಟ್ಸ್ ಆಗಿರುತ್ತಾರೆ ಅಂಥವರಿಗೆ ನಿಯಮ 48 ಎ ಪ್ರಕಾರ ಕನ್‌ಫರ್ಮೇಷನ್ ಆಗಬೇಕಾಗಿತ್ತು. ಅಂಥವರಿಗೆ ಸ್ವಾಧೀನ ಹಕ್ಕನ್ನು ಕೊಡಬೇಕಾಗಿತ್ತು. ಆದರೆ ಇದರ ಬಗ್ಗೆ ಅವರುಗಳಿಗೆ ಗೊತ್ತಿಲ್ಲದಿರುವುದರಿಂದ ಫಾರಂ 7ನ್ನು ಹಾಕಿಕೊಳ್ಳಲು ಸಾಧ್ಯವಾಗಿಲ್ಲ. ಆದರೆ ಆಕ್ಚುಯಲಿ ಇವರು ಗೇಣಿದಾರರಾಗಿದ್ದಾರೆ. ಅಂಥವರಿಗೆ ಸ್ವಾಧೀನ ಹಕ್ಕನ್ನು ಒದಗಿಸಿಕೊಡಲು ಇದನ್ನು ತರಲಾಗಿದೆ.

ಶ್ರೀ ಕಾಗೋಡು ತಿಮ್ಮಪ್ಪ : ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ಒಂದು ತೀರ್ಮಾನವಾಗಿದೆ.

MR. SPEAKER : Madam, I will give you sufficient time. I will not push it through in a hurry. Let there be no confusion. Let us debate.

SRI KAGODU THIMMAPPA : Sir, for the benefit of the Member I would like to read one decision. ILR 1995 Karnataka, page 1833. ``Claim for occupancy right rejected. Whether tenant entitled to claim benefit under section 77. The question is when an application for grant of occupancy right is rejected on the ground that the applicaiton was not made within time, whether the tenant is entitled to claim that benfit under Section 77? Since Section 77 of the Act the provides for accupancy right to this possessed tenants, if they fulfill the conditions mentioned therein, the explanation makes it clear that dis-possessed tenants should not only be dis-possessed between 10.9.57 and 24.1.1971 but also be not registered as occupant to get the benefit of Section 77. Therefore, in a limited classes of cases viz., persons who are dis-possessed tenants or displaced tenants or other persons mentioned in Section 77, they would be persons interested in the land available for disposal under Sn.77. But tenants whose applications are belated, are not entitled to the benefit of Section 77." This is not belated. Those who have not filed applicaiton at all, this is for them.

ಶ್ರೀಮತಿ ಪ್ರಮೀಳಾ ನೇಸರ್ಗಿ : ಇದೇ ವಾದವನ್ನು ನಾನು ಹೈಕೋರ್ಟ್‌ನಲ್ಲಿ ವ್ಯಕ್ತಪಡಿಸಿದ್ದೇನೆ. Innocent, ignorant, they have not filed their applicaitons because of their ignorance. All those applications have been rejected, on the ground of being time barred, on the ground of limitation. For those whose applications have been rejected, if they were in possession of the property on 1.3.1974, and they were entitled to the occupancy rights, for them you must make provision. You should have added a provision saying ``notwithstanding..."

MR. SPEAKR : That is right, a good suggestion. Now your point is clear.

SMT. PRAMILA NESARGI : What I wanted to say is that this provision is not made. You should make an amendment here.

MR. SPEAKER : You are more in support of those unfortunate tenants. We are thankful to you. The anxiety is over now.

ಶ್ರೀಮತಿ ಪ್ರಮೀಳನೇಸರ್ಗಿ : ಆ ಒಂದು ಪ್ರಾವಿಜನ್‌ನ್ನು ತಾವು ಮಾಡಬೇಕು. ಮತ್ತೊಂದು ಏನೆಂದರೆ, those applications under Section 44 vest ಆಗಿದೆ Stating that they have not filed their applicaitons, the Government has disposed of those lands vested under Section 45 to other people. They were tenants on 1.3.1974. They have not

made applications or their applications have been rejected by the High Court. In those circumstances lands have been taken away by the Government. After taking over, they have disposed the land to others, not to the tenants. What are you doing for such people? If this Act is to be made applicable to the unfortunate tenants, you must make a provision for them also. That is why I said, if they were in possession on 1.3.94 and if they had not made any application for some reason or the others, such perosn's applications must be considered sympathatically under the land grant rules and the lands must be granted to them.

MR. SPEAKER : If there are specific instances which come to the Government.

ಶ್ರೀಮತಿ ಪ್ರಮೀಳಾ ನೇಸರ್ಗಿ : ಅವರಿಗೆ ಪ್ರಿಯಾರಿಟಿ ಕೊಡಬೇಕು.

ಶ್ರೀ ಕಾಗೋಡುತಿಮ್ಮಪ್ಪ : ಆ ಲ್ಯಾಂಡನ್ನು ಸರ್ಕಾರದ ಲ್ಯಾಂಡ್ ಎಂದು ಅಥವಾ ಸೆಕ್ಷನ್ 74 ಅದನ್ನು ಡಿಸ್‌ಪೋಸ್ ಮಾಡಲು ಸಾಧ್ಯತೆಗಳಿವೆ. ಆದರೆ ಕ್ಲಾಸ್ 'ಬಿ' ನಲ್ಲಿ ಕನ್‌ಫರ್ಮೇಷನ್ ಮಾಡುವಾಗ in Clause (iii) ``has continued to be in actual possession of such land on the date of commencement of the Karnataka Land Reforms (Amendment) Act, 1997"

ಅಧ್ಯಕ್ಷರು : ಹಳ್ಳಿಗಳಲ್ಲಿ ಎಂಥ ನಿರ್ಗತಿಕನಾಗಿದ್ದರೂ ಅವನು ಉಳುಮೆ ಮಾಡುತ್ತಿರುವ ಜಮೀನನ್ನು ದೇವರಿಂದಲೂ ಬಿಡಿಸಲು ಸಾಧ್ಯವಿಲ್ಲ. ಆದ್ದರಿಂದ ಯಾರು ಅರ್ಜಿಯನ್ನು ಹಾಕಿಲ್ಲ, ಯಾರು ಕಂಟಿನ್ಯೂಡ್ ಪೊಜಿಷನ್‌ನಲ್ಲಿ ಇರುತ್ತಾರೆ ಅವರಿಗೆ ಇದು ಅನ್ವಯಿಸುತ್ತದೆ. ಡಿಸ್‌ಪೋಸಸ್ ಆಗಿದ್ದರೂ ಸಹ ಅದೂ ಅದೇ ಕಾರಣಕ್ಕೆ ಆಗಿರುತ್ತದೆ. ಆದರೆ ತಾವು ಹೇಳಿದಂತೆ ಸರ್ಕಾರದ ವಶಕ್ಕೆ ಬಂದು ಅದನ್ನು ಸರ್ಕಾರ ಮತ್ತೆ ಇನ್ಯಾರಿಗಾದರೂ ಕೊಟ್ಟುಬಿಟ್ಟು ಅಂಥ ಪ್ರಕರಣಗಳೇನಾದರೂ ಅವರ ಗಮನಕ್ಕೆ ಬಂದಿದ್ದರೆ if such instances come to the Government notice, let us ask the Government to think of them also. As of now there is nothing like that.

ಶ್ರೀಮತಿ ಪ್ರಮೀಳಾ ನೇಸರ್ಗಿ : ಅಂಥವರಿಗೆ ಇದರಲ್ಲಿ ಪ್ರಾವಿಜನ್ ಮಾಡಬೇಕು. ಇದುವರೆಗೆ ಅರ್ಜಿಯನ್ನು ಹಾಕದಿರುವವರಿಗೆ ಬೆನಿಫಿಟ್‌ನ್ನು ಕೊಡುತ್ತೀರಿ. ಆದ್ದರಿಂದ ಅವರಿಗೂ ಅವಕಾಶ ಕೊಡಬೇಕು.

MR. SPEAKER : Since there are no such cases before the Government, the Government cannot enact a law anticipating a situation. Government would definitely be willing, any Government worth its salt, to offer a remedy to them. We will bring one more amendement.``

ಶ್ರೀಮತಿ ಪ್ರಮೀಳಾ ನೇಸರ್ಗಿ : ಈ ಎರಡು ಕಾರಣಗಳಿಂದ, there are umpteen number of cases. The very purpose of the Act will be frustrated if we don't make...

ಅಧ್ಯಕ್ಷರು : ಇಲ್ಲ, ನಾವು ಇದು ಫ್ರಸ್ಟ್ರೇಟ್ ಆಗುವುದಕ್ಕೆ ಬಿಡಬಾರದು, this House has a social obligation to the tenant class of the state . Let this House take it as a matter of pleasure and privilege. Let us discharge our duty to the tenant.

ಶ್ರೀಮತಿ ಪ್ರಮೀಳಾ ನೇಸರ್ಗಿ : ಈ ಒಂದು ಪ್ರಾವಿಷನ್ ಮಾಡಿ ಎಂದೇ ನಾನು ಕೇಳುತ್ತಿರುವುದು.

MR. SPEAKER : We will examine.

SMT.S. PRAMILA NESARGI : That is all I am requesting.

ಶ್ರೀ ಡಿ.ವಿ. ಸದಾನಂದ ಗೌಡ : ಅಧ್ಯಕ್ಷರೆ, ಒಂದೇ ಒಂದು ಸ್ಪಷ್ಟೀಕರಣವೇನೆಂದರೆ, ಇದರಲ್ಲಿ ಒಂದು ಕಷ್ಟದ ಸಂಗತಿಯಾಗುವುದೇನೆಂದರೆ, ಈಗಾಗಲೇ ಅವರು ಹೇಳಿದಂತೆ, ದಕ್ಷಿಣ ಕನ್ನಡಜಿಲ್ಲೆಯಲ್ಲಿ ಪ್ರತಿ ತಾಲ್ಲೂಕಿನಲ್ಲಿ 15-20 ಸಾವಿರದಷ್ಟು ಅರ್ಜಿಗಳು ಬಂದಿವೆ. ಒಂದು ಕಾಲದಲ್ಲಿ ಅರ್ಜಿ ಹಾಕಿ, ರಿಜೆಕ್ಟ್ ಆಗಿ ಹೈಕೋರ್ಟ್‌ಗೆ ಹೋಗಿ ಹೀಗೆ ಎಲ್ಲಾ ಕಡೆ ಹೋಗಿ ಬಂದಿರುತ್ತಾರೆ. ಇವತ್ತು ಇದರಲ್ಲಿ ನಿರ್ದಿಷ್ಟವಾಗಿ ಯಾರು ಅರ್ಜಿ ಹಾಕಿಲ್ಲವೆಂದು ನಿಗಧಿಯಾಗಿಲ್ಲ. ಒಮ್ಮೆ ಅದು ರಿಜೆಕ್ಟ್ ಆಗಿದ್ದರೆ ಆ ರೀತಿ ರಿಜೆಕ್ಟ್ ಆದವರಿಗೆ ಇದರಲ್ಲಿ ಮತ್ತೊಮ್ಮೆ ಅವಕಾಶವಿಲ್ಲವೆಂದು ಹೇಳಬೇಕು. ಇಲ್ಲದಿದ್ದರೆ, ಸಾವಿರಾರು ಅರ್ಜಿಗಳು ರಿಜೆಕ್ಟ್ ಆದವರು ಕೂಡ ಮತ್ತೆ ಅರ್ಜಿ ಹಾಕುವ ಸಾಧ್ಯತೆಗಳಿವೆ. ಅದಕ್ಕೆ ಇದರಲ್ಲಿ ನಿರ್ದಿಷ್ಟ ಕ್ಲಾಸ್ ಈ ಬಗ್ಗೆ ಇರಬೇಕು. ಯಾರು ಒಮ್ಮೆ ಅರ್ಜಿ ಕೊಟ್ಟು ಅದು ಕಾನೂನು ರೀತ್ಯಾ ರಿಜೆಕ್ಟ್ ಆಗಿದ್ದು ಅಥವಾ ಹೈಕೋರ್ಟ್, ಯಾವುದೇ ನ್ಯಾಯಾಲಯಕ್ಕೆ ಹೋಗಿ ಅರ್ಜಿ ರಿಜೆಕ್ಟ್ ಆಗಿದ್ದರೆ ಆತ ಮತ್ತೆ ಅರ್ಜಿ ಹಾಕಬಾರದು; ಇಲ್ಲದಿದ್ದರೆ ಅವನು ಈಗ ಪೊಸಿಷನ್‌ನಲ್ಲಿ ಇರಬಹುದು.

ಅಧ್ಯಕ್ಷರು : ಸದಾನಂದ ಗೌಡರೆ, ಫಾರಂ 7 ಅನ್ನು ಸಲ್ಲಿಸುವುದಕ್ಕೆ ಸರ್ಕಾರ ಏನು ಕಡೆಯ ದಿನಾಂಕವನ್ನು ನಿಗಧಿ ಮಾಡಿತ್ತು, ಆ ದಿನಾಂಕದೊಳಗೆ ಯಾರು ತಮ್ಮ ಅರ್ಜಿಯನ್ನು ಸಲ್ಲಿಸಿಲ್ಲ, ಯಾರು ಇವತ್ತಿಗೂ ಕೂಡ ಆ ಜಮೀನನ್ನು ತಮ್ಮ ವಶದಲ್ಲಿಟ್ಟುಕೊಂಡಿದ್ದಾರೆ ಅಂತಹವರಿಗೆ ಇದು ಮಾಡಿಸಿರತಕ್ಕಂಥದ್ದು.

ಶ್ರೀ ಡಿ.ವಿ. ಸದಾನಂದಗೌಡ : ಅಧ್ಯಕ್ಷರೆ, I can very well understand that. ಈಗ ಏನಾಗುತ್ತದೆಂದರೆ, ಅವನು ಮೊದಲು ಅರ್ಜಿ ಸಲ್ಲಿಸಿದ್ದಾನೆಯೋ ಇಲ್ಲವೊ ಎಂದು ಪುನಃ ವೆರಿಫಿಕೇಷನ್‌ಗೆ ಎಲ್ಲಾ ಅರ್ಜಿಗಳು ಹೋಗಬೇಕಾಗುತ್ತದೆ. ಅದಕ್ಕೆ at least, there must be an affidavit in support of his application. ಇದರಲ್ಲಿ ಯಾರುಬೇಕಾದರೂ ಅರ್ಜಿ ಹಾಕಬಹುದು.

ಅಧ್ಯಕ್ಷರು : ಅದಕ್ಕೆ ನಾನು ಏನು ಹೇಳುತ್ತೇನೆಂದರೆ, they always change the necessary rules and say ಅಪ್ಲಿಕೇಶನ್ ಬಿಲ್ಟ್ ಅಪ್ ಮಾಡುವಾಗ ತಾಲ್ಲೂಕು ಕಛೇರಿಗೆ ಬರುತ್ತದೆ, Verify whether this applicant had filed earlier application before land tribunal' ಅವರು ವೆರಿಫೈ ಮಾಡಿದಾಗ ಟ್ರಿಬ್ಯುನಲ್‌ನಲ್ಲಿ ಡಾಕ್ಯುಮೆಂಟ್ ಇರುವುದಿಲ್ಲ, ಅಥವಾ ಇನ್ನೊಬ್ಬರು ಇರುತ್ತಾರೆ,

ಮೊದಲು ಅವರು ಹಾಕಿದ್ದಾರೆ, ರಿಜೆಕ್ಟ್ ಆಗಿದೆ, ಈಗ ಬರುತ್ತಾರೆ, he will not get this benefit. Because they are not reopening. This is an opening provided only to these unfortunats people who unfortunately could not avail this opportunity.

ಶ್ರೀ ಡಿ.ವಿ. ಸದಾನಂದ ಗೌಡ : ನಾವು ಅದನ್ನು ಸ್ವಾಗತ ಮಾಡುತ್ತೇವೆ, ಜಿಲ್ಲಾಧಿಕಾರಿಗಳಿಗೆ ಅಥವಾ ವಿಶೇಷ ಜಿಲ್ಲಾಧಿಕಾರಿಗಳಿಗೆ ಅಧಿಕಾರ ನೀಡಲಾಗಿದೆ ಎಂದು ಕೊಟ್ಟಿದ್ದಾರೆ, ಅದೂ ಕೂಡ ನಿಧಾನವಾಗುತ್ತದೆ. ಎಲ್ಲಾ ಅಧಿಕಾರಗಳನ್ನು, ಈಗ ಲ್ಯಾಂಡ್ ರೆವಿನ್ಯೂ ಆ್ಯಕ್ಟ್, ಲ್ಯಾಂಡ್ ರಿಫಾರ್ಮ್ಸ್ ಆ್ಯಕ್ಟ್ ಹೀಗೆ ಪ್ರತಿಯೊಂದರಲ್ಲೂ ಕೂಡ ಡಿಲೇ ಇರುವುದರಿಂದ ತೊಂದರೆಯಾಗುತ್ತಿದೆ.

ಅಧ್ಯಕ್ಷರು : ಸದಾನಂದ ಗೌಡರೆ, ಇದು ಸರ್ಕಾರದ ಗಮನಕ್ಕೂ ಕೂಡ ಬಂದಿರಬಹುದು, 1974 ಆದಮೇಲೆ ಅನೇಕ ಪ್ರಕರಣಗಳಲ್ಲಿ ಟೆನೆಂಟ್ಸ್ ಅಪ್ಲಿಕೇಷನ್ಸ್ ಕೊಟ್ಟಿದ್ದು ಕೆಲವು ಕಡೆ ರಿಜಿಸ್ಟರ್‌ನಲ್ಲಿ ಸರಿಯಾಗಿ ಎಂಟ್ರಿ ಮಾಡದೆ ಅಪ್ಲಿಕೇಷನ್ಸ್ ಅನ್ನೆ ಗಯಬ್ ಮಾಡಿದ್ದರು. ಆಗ ಕಂದಾಯ ಮಂತ್ರಿಗಳಾಗಿ ಮಲ್ಲಿಕಾರ್ಜುನ ಖರ್ಗೆಯವರಿದ್ದರೋ ಬಸವಲಿಂಗಪ್ಪನವರು ಇದ್ದರೋ ನೆನಪಿಲ್ಲ ಒಂದು ಹೊಸ ಸರ್ಕಾರಿ ಆದೇಶವನ್ನೇ ಹೊರಡಿಸಿದ್ದರು. ಯಾವ್ಯಾವ ಅಪ್ಲಿಕೇಷನ್, ಯಾವ ಒಂದು ಚೂರು ಕಾಗದವಿದ್ದರೂ ಕೂಡ ಅವರು ಅಪ್ಲಿಕೇಷನ್ ಕೊಟ್ಟಿದ್ದಾರೆಂದು ಪ್ರೂಫ್, ಯಾವ ಸ್ಟೇಜ್‌ನಲ್ಲಿ ಕಳೆದು ಹೋಗಿದೆ ಅಲ್ಲಿಂದ ರಿಬಿಲ್ಡ್ ಮಾಡಿ ಟೆನೆಂಟ್ಸ್‌ಗೆ ಅವರ ಹಕ್ಕನ್ನು ಎಸ್ಟಾಬ್ಲಿಷ್ ಮಾಡಬೇಕೆಂದು ಮಾಡಿದೆ. ಅವೆಲ್ಲಾ ಸಾಲದುದರಿಂದ ಮತ್ತೆ ತೊಂದರೆಯಾಗಿರುವುದರಿಂದ ಈ ತಿದ್ದುಪಡಿಯನ್ನು ತಂದಿದ್ದಾರೆ. Theis is a piece of progressive legislation. ಏತಕ್ಕೆ ಈ ಚರ್ಚೆ?

ಶ್ರೀ ಡಿ.ವಿ. ಸದಾನಂದ ಗೌಡ : ಆದರೆ, ಜಿಲ್ಲಾಧಿಕಾರಿಗಳು, ವಿಶೇಷ ಜಿಲ್ಲಾಧಿಕಾರಿಗಳು ಎಲ್ಲಾ ಅರ್ಜಿಗಳನ್ನು ಸ್ಕ್ರುಟಿನೈಸ್ ಮಾಡಬೇಕೆಂದು ಹೇಳಿದ್ದರೆ,

ಅಧ್ಯಕ್ಷರು : ಮಾನ್ಯ ವಿರೋಧಪಕ್ಷದ ನಾಯಕರು ಸಲಹೆಯನ್ನು ಕೊಟ್ಟಿದ್ದಾರೆ. ನಮ್ಮ ಮುಂದೆ ಕರ್ನಾಟಕ ರಾಜ್ಯದಲ್ಲಿ ಪ್ರಯೋಗ ಮಾಡಿದ್ದು ಇದೆ, ನಾನ್ ಅಫಿಶಿಯಲ್ ಮೆಂಬರ್ಸ್ ಅನ್ನೆ ಮಾಡಿದ್ದೇವೆ, ಇದನ್ನು ಕೂಡ ಯೋಚನೆ ಮಾಡಿ ಎನ್ನುವ ಮಾತನ್ನು ಕೂಡ ಹೇಳಿದ್ದಾರೆ, you also contribute. You endorse the suggestion given.

SRI. D.V. SADANANDA GOWDA : Certainly.

MR. SPEAKER : Very good. Let us see how the Government reacts?

ಶ್ರೀ ಡಿ.ವಿ. ಸದಾನಂದ ಗೌಡ : ಇನ್ನೊಂದು ಹಲವಾರು ಕಡೆ ಟೆಂಪಲ್‌ಗಳಲ್ಲಿ ಲ್ಯಾಂಡ್ಸ್ ಇದ್ದಾವೆ.

ಅಧ್ಯಕ್ಷರು : ಟೆಂಪಲ್‌ಗಳ ಬಗ್ಗೆ ಹೋಗುವುದು ಬೇಡ, let us not go to the temples issue. ಅರಗಜ್ಞಾನೇಂದ್ರರವರೆ ಮಾತನಾಡಿ.

ಶ್ರೀ ಅರಗಜ್ಞಾನೇಂದ್ರ : ಅಧ್ಯಕ್ಷರೆ, ಇಲ್ಲಿ 1974 ರಲ್ಲಿ ಈ ಒಂದು ಕಾನೂನು ಉಳುವವನ್ನೇ ಭೂ ಒಡೆಯನನ್ನಾಗಿ ಮಾಡುವ ಉದ್ದೇಶದಿಂದ ತಂದರು. ಅನೇಕ ಜನರಿಗೆ ಅರ್ಜಿಯನ್ನೇ ಹಾಕುವುದಕ್ಕೆ ಅವಕಾಶ ಕೊಡಲಿಲ್ಲ, ಇವತ್ತು ಕೂಡ ಆ ಒಂದು ಪರಿಸ್ಥಿತಿ ಬದಲಾವಣೆಯಾಗಿದೆ ಎನ್ನುವುದೇನು ಇಲ್ಲ. ಅರ್ಜಿ ಹಾಕುವುದಕ್ಕೆ ಈ ಕಾನೂನು ತಂದ ಕೂಡಲೇ ಆಗುವುದಿಲ್ಲ. ಅನೇಕ ಟೆನೆಂಟ್ಸ್‌ಗಳಿಗೆ ಅರ್ಜಿ ಹಾಕುವುದಕ್ಕೆ ಸರ್ಕಾರ ಯಾವ ರೀತಿಯ ರಕ್ಷಣೆಯನ್ನು ಕೊಡುತ್ತದೆ ಎನ್ನುವ ಆಶ್ವಾಸನೆಯನ್ನು ಆ ನತದೃಷ್ಟ ಜನರಿಗೆ ತಾವು ಕೊಡಬೇಕು. ಏಕೆಂದರೆ ಹಿಂದೆಯೂ ಕೂಡ ಅವಕಾಶ ಕೊಟ್ಟಾಗ, ಕೆಲವರು ಗೊತ್ತಿಲ್ಲದೆ ಹಾಕಲಿಲ್ಲ, ಅದಕ್ಕೆ ಅವರ ದಡ್ಡತನವೊ ಏನೊ ಅವರಿಗೆ ತಿಳಿಯಲಿಲ್ಲ. ಆದರೆ ಅನೇಕರಿಗೆ ಕೊಡದೆ ಇರುವ ಹಾಗೆ ವ್ಯವಸ್ಥಿತವಾಗಿ ತಡೆದಿದ್ದರು. ಆ ರೀತಿಯ ಜನರಿಗೆ ಯಾವ ರೀತಿಯ ರಕ್ಷಣೆಯನ್ನು ಸರ್ಕಾರ ಕೊಡುತ್ತದೆ ಎನ್ನುವುದನ್ನು ಸರ್ಕಾರ ಹೇಳಬೇಕು. ಉದಾಹರಣೆಗೆ ಈಗ ದಕ್ಷಿಣ ಕನ್ನಡ ಶಿವಮೊಗ್ಗ ಜಿಲ್ಲೆಗಳಲ್ಲಿ ಒಂದು ರಾಜಕೀಯವಾಗಿರುವ ಒಂದು ದೊಡ್ಡ ಅಂಧೋಳನವೇ ಗೇಣಿ ರೈತರ ಪರವಾಗಿ ನಡೆದಿತ್ತು. ಅಲ್ಲಿ ಇಂತಹ ಬಹಳ ಭೂಮಿಗಳು ಉಳಿಯಲಿಲ್ಲ, ಈ ರಾಯಚೂರು, ಗುಲ್ಬರ್ಗಾದ ಭಾಗಗಳಲ್ಲಿ ಹೋಗಿ ನೋಡುತ್ತಿದ್ದೇನೆ ಇವತ್ತು ಕೂಡ ಒಂದೊಂದು ಕುಟುಂಬದ ವ್ಯಾಪ್ತಿಯಲ್ಲಿ ನೂರು ಎಕರೆ ಭೂಮಿಯನ್ನು ಇನ್ನೂ ಕೂಡ ಇಟ್ಟು ಕೊಂಡಿದ್ದಾರೆ, ಬೇರೆಯವರು ವ್ಯವಸಾಯ ಮಾಡಿ ಇವರ ಮನೆಗೆ ದವಸವನ್ನು ತಂದು ಸುರಿಯುತ್ತಿದ್ದಾರೆ. ಈ ಕಾನೂನನ್ನು ಅವರು ದೃಷ್ಟಿಯಲ್ಲಿಟ್ಟುಕೊಂಡು ಮಾಡಿದ್ದರೆ, ಅಂತಹ ನತದೃಷ್ಟಿ ಜನರಿಗೆ ಈ ಸರ್ಕಾರ ಏನು ರಕ್ಷಣೆಯನ್ನು ಕೊಡುತ್ತದೆ ಎನ್ನುವುದನ್ನು ದಯಮಾಡಿ ತಿಳಿಸಬೇಕು. ಇನ್ನೊಂದು ಇಲ್ಲಿ ಮಾನ್ಯ ದೇವರಾಜ ಅರಸ್‌ರವರು ಅಧಿಕಾರಿಗಳು ಬೇಡ, ವಕೀಲರು ಹಾಜರಾಗುವುದು ಬೇಡ, ಹಳ್ಳಿಗಳಲ್ಲಿ ನಮ್ಮ ಸಮಾಜದಿಂದಲೇ ಬಂದಿರುವ ಮೆಂಬರ್‌ಗಳು ಎಷ್ಟೇ ತಪ್ಪು ಮಾಡಿದ್ದರೂ ಕೂಡ ಸಾಮಾಜಿಕವಾದ ಒಂದು ಹೆದರಿಕೆ ಇರುತ್ತದೆ ಎಂದು ಹೇಳಿದ್ದರು. ಬಹುಶಃ ಬೇರೆ ತಾಲ್ಲೂಕಿನಲ್ಲಿ ಏನಾಗಿದೆಯೋ ಗೊತ್ತಿಲ್ಲ ನಮ್ಮ ಶಿವಮೊಗ್ಗ ಜಿಲ್ಲೆಯ ಕೆಲವು ತಾಲ್ಲೂಕುಗಳಲ್ಲಿ ಬಹಳ ಯಶಸ್ವಿಯಾಗಿ ಆಗಿದೆ, ಅಲ್ಲಿ ಯಾವುದೇ ಪಕ್ಷದ ಸದಸ್ಯರು ಅಲ್ಲಿ ಕುಳಿತುಕೊಂಡಿರಲಿ, ಇತ್ತೀಚೆಗೆ ಕೆಟ್ಟುಹೋಗಿದ್ದಾರೆ, ಅದು ಬಿಡಿ. ಅವರಲ್ಲೂ ಕೂಡ ಏನಾದರೂ ನಿಯಂತ್ರಣದಲ್ಲಿ ತರುವಂಥದ್ದನ್ನು ಮಾಡಿ ಇದನ್ನು ಅಲ್ಲಿಯ ಟ್ರಿಬ್ಯುನಲ್‌ಗೆ ಕೊಟ್ಟರೆ ಒಳ್ಳೆಯದೆನ್ನುವುದು ನನ್ನ ವೈಯಕ್ತಿಕ ಸಲಹೆ; ಇದನ್ನು ಮಾಡಬೇಕು. ಏಕೆಂದರೆ, ಊರು, ಮನೆ ಗೊತ್ತಿರುತ್ತದೆ, ಅಷ್ಟು ಸುಲಭವಾಗಿ ಯಾರು ತಪ್ಪಿಸಿಕೊಳ್ಳುವುದಕ್ಕೆ ಆಗುವುದಿಲ್ಲ. ನಾನು ಇವತ್ತು ಟ್ರಿಬ್ಯುನಲ್ ಮೆಂಬರ್ ಆಗಿ ಅವನ ಜಮೀನನ್ನು ಬಿಡಿಸಿದರೆ ಅಥವಾ ಇನ್ನೊಬ್ಬ ಯಾರಿಗೊ ಖಾತೆ ಹಾಕಿಕೊಟ್ಟರೆ ನನ್ನನ್ನು ಅಷ್ಟು ಸುಲಭವಾಗಿ ಬಿಡುವುದಿಲ್ಲ, ನಾನು ಆ ಹಳ್ಳಿಯಲ್ಲಿ ಬದುಕುವುದಕ್ಕೂ ಕೂಡ ಆಗುವುದಿಲ್ಲ. ಇನ್ನೊಂದು ಹಿಂದೆ ಲ್ಯಾಂಡ್ ಟ್ರಿಬ್ಯುನಲ್ ಆಕ್ಟ್‌ಗೆ ಖುಷ್ಕಿ ಜಮೀನುಗಳು ಬಂದಿರಲಿಲ್ಲ. ನಮ್ಮಲ್ಲಿ ಈ ಜಾನುವಾರುಗಳನ್ನು ಸಾಕುವುದಕ್ಕೆ ಒಡೆಯರಿಂದ ಖುಷ್ಕಿ ಜಮೀನನ್ನು ಪಡೆದಿದ್ದರು, ಟೆನೆಂಟ್ ಹೆಸರಿನಲ್ಲೇ ಪಾಣಿ ಇದ್ದರೂ ಕೂಡ, ಅವತ್ತು ತನ್ನ ವ್ಯಾಪ್ತಿಗೆ ಬರುವುದಿಲ್ಲವೆಂದು ಖುಷ್ಕಿ ಜಮೀನನ್ನು ಹೊರಗೆ ಇಟ್ಟರು, ತೀರ್ಪಿನಲ್ಲಿ ಸೇರಿಸಲಿಲ್ಲ. ತರಿ ಜಮೀನು, ತೋಟ, ಬಾಗಾಯ್ತು, ತರಿ ಇಂಥವನ್ನು ಸೇರಿಸಿದರೆ ವಿನಃ ಖುಷ್ಕಿ ಜಮೀನ್ನು ಲ್ಯಾಂಡ್ ಟ್ರಿಬ್ಯುನಲ್ ವ್ಯಾಪ್ತಿಗೆ

ಬರುವುದಿಲ್ಲವೆಂದರೆ ಹಾಗೆ ಬಿಟ್ಟಿದ್ದೇವೆಂದು ಹೊರೆಗೆ ಇಟ್ಟರು. ಅದಕ್ಕೆ ಇವತ್ತು ಕೂಡ ಪೊಸಿಷನ್ ಟೆನೆಂಟ್ಸ್ ಹತ್ತಿರವಿದೆ, ಅವರು ಅರ್ಜಿ ಹಾಕಿಕೊಳ್ಳಬಹುದೇ ಎನ್ನುವುದಕ್ಕೆ ದಯಮಾಡಿ ಒಂದು ಸ್ಪಷ್ಟೀಕರಣ ಬೇಕಾಗಿದೆ. ಆಮೇಲೆ ವಿಶೇಷ ಜಿಲ್ಲಾಧಿಕಾರಿಗಳನ್ನು ಇದಕ್ಕೆ ಮಾಡುತ್ತೇವೆಂದು ಹೇಳಿದರು, ನಾನು ಹೇಳುತ್ತೇನೆ, ನನ್ನ ಒಂದೇ ತಾಲ್ಲೂಕಿನಲ್ಲಿ 750 ಇನಾಂ ಲ್ಯಾಂಡಿನ ಅರ್ಜಿಗಳು ಇವತ್ತು ಕೂಡ ಇದ್ದಾವೆ, ಜಿಲ್ಲಾಧಿಕಾರಿಗಳಿಗೆ ಕಾನೂನಿನಲ್ಲಿ ತಾವು ಅವಕಾಶ ಕೊಟ್ಟಿದ್ದರೂ ಒಂದು ಅರ್ಜಿಯನ್ನು ಕೂಡ ಇತ್ಯರ್ಥ ಮಾಡುವುದಕ್ಕಾಗಲಿಲ್ಲ, ಅವರಿಗೆ ಸಮಯವಿಲ್ಲ, ಮಾಡುವುದಕ್ಕಾಗುವುದಿಲ್ಲ. ಹಲವಾರು ವರ್ಷಗಳಿಂದ ಅವರು ಯಾವುದೇ ಸಾಲ ತೆಗೆದುಕೊಳ್ಳುವುದಕ್ಕಾಗುವುದಿಲ್ಲ.

ಅಧ್ಯಕ್ಷರು : ಟ್ರಿಬ್ಯುನಲ್‌ಗೆ ರೆಫರ್ ಮಾಡಿ ಎಂದು ಹೇಳಿದ್ದೀರಲ್ಲ, ಆ ಅಂಶ ಅದರಲ್ಲಿ ಸೇರಿಸಲಾಗಿದೆ.

ಶ್ರೀ ಆರಗ ಜ್ಞಾನೇಂದ್ರ : ನಮ್ಮ ಕೆಲವು ತಾಲ್ಲೂಕುಗಳಲ್ಲಿ ಏನಾಗಿದೆ ಎಂದರೆ, ಒಂದು ಸಾರಿ ಡಿಕ್ಲರೇಷನ್ ಕೊಟ್ಟಿದ್ದಾರೆ, ಒಂದು ತೀರ್ಪು ಆಗಿದೆ. ಪಾಪ ಗೇಣಿದಾರನಿಗೆ ಭೂಮಾಲೀಕ ಕೊಡುವಾಗ ಬಾಯಿ ಮಾತಿನಲ್ಲಿ ಇಂಥ ಸರ್ವೆ ನಂಬರ್ ಎಂದು ಹೇಳಿ ಕೊಟ್ಟಿದ್ದಾನೆ, ಅವರು ನೋಡಿರಲಿಲ್ಲ, ಇವರು ನೋಡಿರಲಿಲ್ಲ. ಸರ್ವೆ ಷರತ್ತುಗೊಳಪಡಿಸಿ ಒಂದು ತೀರ್ಪು ಕೊಟ್ಟ ನಂತರ ಹೋಗಿದ್ದಾರೆ. ಸರ್ವೆಗೆ ಹೋದಾಗ ಡಿಕ್ಲರೇಷನ್‌ನಲ್ಲಿ ಕೊಟ್ಟಂಥ ಸರ್ವೆ ನಂಬರ್‌ಗಳೇ ಬದಲಾವಣೆಯಾಗಿದ್ದಾವೆ. ನನ್ನ ಕ್ಷೇತ್ರದ ಕೋಣಂದೂರು ಈ ಭಾಗದ ಜಮೀನ್ದಾರರು ಬಹಳ ಯೋಚನಾಪರರಾಗಿದ್ದಾರೆ. ಈ ಸರ್ವೆ ನಂಬರ್‌ಗಳು ವ್ಯತ್ಯಾಸವಾಗಿ ಅವರಿಗೆ ಇವತ್ತು ಖಾತೆ ಮಾಡಿಕೊಳ್ಳುವುದಕ್ಕಾಗುತ್ತಿಲ್ಲ. ಸರ್ವೇ ನಂಬರ್ ಛೇಂಜ್ ಆದರೆ ಈಗಿನ ಕಾನೂನಿನ ಪ್ರಕಾರ ರ‍್ಯಾಟಿಫಿಕೇಷನ್‌ಗೆ ಅವಕಾಶವಿಲ್ಲ. ಅದಕ್ಕೆ ಈ ತಿದ್ದುಪಡಿಯ ಅಡಿಯಲ್ಲಿ ಅವಕಾಶ ಮಾಡಿ ಕೊಟ್ಟರೆ ಒಳ್ಳೆಯದು. 1974ರ ಹಿಂದೆ ಅವರು ಪೊಸೆಷನ್‌ನಲ್ಲಿ ಇದ್ದು ಅವತ್ತು ಡಿಕ್ಲರೇಷನ್ ಹಾಕದೇ ಇದ್ದವರಿಗೆ ಮಾತ್ರ ಅವಕಾಶವಿದೆ. ಅವತ್ತು ಡಿಕ್ಲರೇಷನ್ ಹಾಕಿ ಬಿಟ್ಟಿದ್ದಾರೆ. ಒಂದು ಸಾರಿ ತೀರ್ಪು ಅವರ ಹೆಸರಿಗೆ ಆಗಿದೆ.

ಅಧ್ಯಕ್ಷರು : ಇದು ಬಹಳ ಸಿಂಪಲ್ ಅಮೆಂಡ್‌ಮೆಂಟ್ ಇದನ್ನು ಪಾಸ್ ಮಾಡಿ ಕೊಳ್ಳೋಣ. ಉಳಿದದ್ದು ನೀವೆಲ್ಲಾ ಏನು ಹೇಳುತ್ತೀರಿ ಅದನ್ನು ಯೋಚನೆ ಮಾಡೋಣ. ಯಾರು ಆ ನತದೃಷ್ಟರು ಇದ್ದಾರೆ, ಅರ್ಜಿ ಹಾಕುವುದಕ್ಕೆ ಆಗಲಿಲ್ಲ, ಪೊಸೆಷನ್‌ನಲ್ಲಿದ್ದಾರೆ ಅವರಿಗೆ ಅನುಕೂಲ ಮಾಡಿಕೊಡುವುದು ಅಷ್ಟೆ.

ಶ್ರೀ ಬಿ. ಸೋಮಶೇಖರ್ : ನಾನು ಒಂದು ಅಫಿಷಿಯಲ್ ಅಮೆಂಡ್‌ಮೆಂಟ್ ಮೂವ್ ಮಾಡುತ್ತಿದ್ದೇನೆ. ಇಂತಹ ಒಂದು ಪ್ರಕ್ರಿಯೆಯನ್ನು ಒಂದು ವರ್ಷದ ಒಳಗೆ ಸೆಕ್ಷನ್ 77ರಲ್ಲಿ ಜಿಲ್ಲಾಧಿಕಾರಿಗಳು ಸ್ಪಾಟ್ ಇನ್‌ಸ್ಪೆಕ್ಷನ್ ಮಾಡಿ ಯಾರು ಆಕ್ಚುಯಲ್ ಪೊಸೆಷನ್‌ನಲ್ಲಿದ್ದಾರೆ ಎಂದು ಗ್ರಾಮ ಸಭೆ ಮಾಡಿ ಖುದ್ದಾಗಿ ನೋಡಿ ಅವರಿಗೆ ಸ್ಯಾಟಿಸ್‌ಫೈ ಮಾಡಬೇಕೆಂದು ಕಾನೂನು ಇದೆ. ಅದನ್ನು ಒಂದು ವರ್ಷದಲ್ಲಿ ಮಾಡಬೇಕೆಂದು ನಾನು ಅಫಿಷಿಯಲ್ ಅಮೆಂಡ್‌ಮೆಂಟ್ ಸೇರಿಸುತ್ತಿದ್ದೇನೆ. ಇದರ ಉದ್ದೇಶವೇನೆಂದರೆ, ಯಾರು ವರ್ಷಾನುಗಟ್ಟಲೆ ಸ್ವಾಧೀನದಲ್ಲಿದ್ದಾರೆ, ಫೀಸ್‌ಫುಲ್

ಎಂಜಾಯ್‌ಮೆಂಟ್‌ನಲ್ಲಿದ್ದಾರೆ ಫಾರಂ ನಂ.7 ಹಾಕಿ ಸೆಕ್ಷನ್ 48(ಎ) ಪ್ರಕಾರ ಅವರಿಗೆ ಅಕ್ಯುಪೆನ್ಸಿ ರೈಟ್ ಕೊಡುವುದಕ್ಕೆ ಆಗಲಿಲ್ಲ, ಅಂತಹವರಿಗೆ ಮಾತ್ರ ಕೊಡುವುದು. ಮಾನ್ಯ ಅಧ್ಯಕ್ಷರು ಹೇಳಿದ ಹಾಗೆ ಇದು ಒಂದು ಸಿಂಪಲ್ ಅಮೆಂಡ್‌ಮೆಂಟ್. ಯಾರು ನಿಜವಾದ ಟೆನೆಂಟ್ಸ್ ಸ್ವಾಧೀನದಲ್ಲಿದ್ದಾರೆ 1.3.74 ರವರೆಗೆ, ಆದರೆ ಅಪ್ಲಿಕೇಷನ್ ಹಾಕುವುದಕ್ಕೆ ಆಗಲಿಲ್ಲ, ಅಪ್ಲಿಕೇಷನ್ ಹಾಕಿರುವವರಿಗೆ ಲ್ಯಾಂಡ್ ಟ್ರಿಬ್ಯುನಲ್ ಇದೆ ಅದನ್ನು ಮೆರಿಟ್ ಮೇಲೆ ಡಿಸೈಡ್ ಮಾಡುತ್ತದೆ. ಅದು ಬೇರೆ ಪ್ರಶ್ನೆ. ಯಾರು ಅಪ್ಲಿಕೇಷನ್ ಹಾಕಲಿಲ್ಲ,, ಜಿಲ್ಲಾಧಿಕಾರಿಗಳು ಖುದ್ದಾಗಿ ಪರಿಶೀಲನೆ ಮಾಡಿ ಅಂತಹವರಿಗೆ ಅಕ್ಯುಪೆನ್ಸಿ ರೈಟ್ ಕೊಡುವುದಕ್ಕೆ ಅವಕಾಶ ವಿದೆ.

ಶ್ರೀ ಡಿ.ವಿ. ಸದಾನಂದಗೌಡ : ಟೈಮ್ ಬೌಂಡ್ ಪ್ರೋಗ್ರಾಂ ಮಾಡಿದ್ದರೂ ಕೂಡ ವಿಪರೀತ ಅಪ್ಲಿಕೇಷನ್ಸ್ ಬಂದಾಗ....

ಅಧ್ಯಕ್ಷರು : ಇದಕ್ಕೆ ತಾವು ಸಜೆಷನ್ಸ್ ಕೊಟ್ಟಿದ್ದೀರಿ. ಇದರ ಬಗ್ಗೆ ವಿರೋಧ ಪಕ್ಷದ ನಾಯಕರೂ ಕೂಡ ಸಲಹೆ ಕೊಟ್ಟಿದ್ದಾರೆ. ಮಾನ್ಯ ಯಡಿಯೂರಪ್ಪನವರೂ ಮಾತನಾಡುವವರಿದ್ದಾರೆ, ಎಲ್ಲರೂ ಹೇಳಲಿ. We will try to appraise the hon. minister.

ಶ್ರೀ ಅರಗ ಜ್ಞಾನೇಂದ್ರ : ಪಾಣಿ ಕಾಲಂನಲ್ಲಿ ಗೇಣಿ ರೈತನ ಪಾಣಿಯಲ್ಲಿ ಗೇಣಿ ರೈತನ ಹೆಸರು ಇತ್ತು. ಡಿಕ್ಲರೇಷನ್ ಆಗಿದೆ ಇದ್ದವರಿಗೆ ಬಹುಶಃ ಇದರಲ್ಲಿ ಆಗಿದೆ. ಅವರ ಹೆಸರಿನ ಪಾಣಿಯಲ್ಲಿ ಎಂಟ್ರಿ ಮಾಡುವುದಕ್ಕೆ ಬಿಡಲಿಲ್ಲ. ಆದರೂ ಅವನು 74ರ ಹಿಂದಿನಿಂದ ಪೊಸೆಷನ್‌ನಲ್ಲಿದ್ದಾನೆ. ಅದನ್ನು ಯಾವ ರೀತಿ ಜಿಲ್ಲಾಧಿಕಾರಿಗಳು ಐಡೆಂಟಿಫೈ ಮಾಡಬೇಕು ಎನ್ನುವುದನ್ನು ತಿಳಿಸಬೇಕಾಗುತ್ತದೆ.

ಅಧ್ಯಕ್ಷರು : ಸ್ಪಾಟ್ ಇನ್‌ಸ್ಪೆಕ್ಷನ್‌ಗೆ ಹೋದಾಗ ಪಾಣಿ, ಗೇಣಿ ಯಾವ ಯಾವ ಸುಳ್ಳು ದಾಖಲೆ ಸೃಷ್ಟಿ ಮಾಡಿದ್ದು ಎಲ್ಲಾ ಗಾಳಿಗೆ ಹಾರಿ ಹೋಗುತ್ತದೆ. ಊರಿನ ಜನ ಯಾರೂ ಬಂದು ಅವನು ಮಾಡುತ್ತಿರುವುದು ಸುಳ್ಳು ಎಂದು ಹೇಳುವುದಿಲ್ಲ. ನಮ್ಮ ಜನ ಅಂತಹ ನೀಚರಲ್ಲ. ಯಾರು ಮಾಡುತ್ತಿರುತ್ತಾರೆ, ಅವರು ಅಲ್ಲಿ ನಿಂತಿರುತ್ತಾರೆ, ನಂಬರ್ ತಾನೇ ಸಿಕ್ಕಿದೆ, ಅನೇಕ ಕಡೆ ಎಂಟ್ರೀಸ್ ಮಾಡುವುದಿಲ್ಲ. ಟೆನೆಂಟ್ಸ್ ಪರವಾಗಿ ಆರ್‌ಟಿಸಿ. ಎಮ್‌ಪಿಸಿ ಇವೆಲ್ಲಾ ಸಿಗುವುದಿಲ್ಲ.

ಶ್ರೀ ಅರಗ ಜ್ಞಾನೇಂದ್ರ : ನನ್ನ ಅನುಭವ ಇದೆ. ಇಡೀ ಊರು ಒಂದಾಗಿ ಅನೇಕ ಗೇಣಿ ರೈತರಿಗೆ ಹೊರಗೆ ಹಾಕಿದ್ದು ಇದೆ. ಕಾಗೋಡು ತಿಮ್ಮಪ್ಪನವರಿಗೆ ಗೊತ್ತಿಲ್ಲದ್ದು ಏನೂ ಇಲ್ಲ. ಇಡೀ ಊರು ಒಂದಾಗಿ ಅವನಿಗೆ ಹೊಸ ವಿಟ್‌ನೆಸ್ ಕೂಡ ಸಿಗದ ಹಾಗೆ ಮಾಡಿದ ಪ್ರಕರಣಗಳಿವೆ. ಇದಕ್ಕೆ ಸರ್ಕಾರದ ಸಲಹೆ ಏನಾದರೂ ಇದ್ದರೆ ಕೊಡಿ.

ಅಧ್ಯಕ್ಷರು : ದೃಢವಾದ ಮನಸ್ಸಿನಿಂದ ಆ ವರ್ಗ ಸಂಘಟನೆ ಮಾಡಿ ಹೋರಾಟ ಮಾಡಬೇಕು.

SRI KAGODU THIMMAPPA : The words used are, land held by or in possession of the tenant.

ಶ್ರೀ ಬಿ. ಸೋಮಶೇಖರ್ : ಪಾಣಿ ಅದು ಮಿಕ್ಸ್ ಮಾಡುವುದು ಬೇಡ. ಇದು ಒಂದು ಸಿಂಪಲ್ ಅಮೆಂಡ್‌ಮೆಂಟ್.

ಡಾ|| ಎಂ.ಪಿ. ಕರ್ಕಿ : ಲ್ಯಾಂಡ್ ರಿಫಾರ್ಮ್ಸ್ ಆಕ್ಟ್‌ನಲ್ಲಿ ರೆಕಾರ್ಡ್ ಟೆನೆಂಟ್ ಇದ್ದು ಅಪ್ಲಿಕೇಷನ್ ಹಾಕದೇ ಹೋದರೆ That land vests with the government. Does this amendment apply only to those cases? ಅನೇಕ ಸ್ಪಿಪ್ಯುಲೇಟೆಡ್ ಟೈಮ್‌ನಲ್ಲಿ ಅಪ್ಲಿಕೇಷನ್ ಹಾಕುವುದಕ್ಕೆ ಆಗಲಿಲ್ಲ, ಹಾಕುವುದಕ್ಕೆ ಕೊಡಲಿಲ್ಲ, ಕೆಲವು ಜನ ಹಾಕಲೂ ಇಲ್ಲ. ಆದರೆ ಪಾಣಿಯಲ್ಲಿ ಅವರ ಹೆಸರು ಇದೆ. They are recorded tenants. ಲ್ಯಾಂಡ್ ರಿಫಾರ್ಮ್ಸ್ ಆಕ್ಟ್ ಪ್ರಕಾರ ಅಂತಹ ಜಮೀನು ಮಾತ್ರ ಸರ್ಕಾರಕ್ಕೆ ಸ್ವಾಧೀನವಾಗುತ್ತದೆ. ಬಾಕಿ ಹೋಗುವುದಿಲ್ಲ. ಅದಕ್ಕಾಗಿ ಇದರ ಸ್ಕೋಪ್ ಅಷ್ಟಕ್ಕೆ ಮಾತ್ರ ಸೀಮಿತವೆಂದು ನನ್ನ ಅನಿಸಿಕೆ. ಅಷ್ಟಕ್ಕೆ ಆದರೆ ಬಹಳ ಒಳ್ಳೆಯದು. ಏಕೆಂದರೆ, ಯಾವ ಲಿಟಿಗೇಷನ್ ಇರುವುದಿಲ್ಲ. because he will be in possession of the land even today. ಅದಲ್ಲದೆ ಹೋದರೆ ಇದರ ವ್ಯಾಪ್ತಿ ಜಾಸ್ತಿ ಆಗುತ್ತಾ ಹೋದರೆ ತೊಂದರೆಯಾಗುತ್ತದೆ. ಇದರ ವ್ಯಾಪ್ತಿ ಬಗ್ಗೆ ಸ್ವಲ್ಪ ಎಕ್ಸ್‌ಪ್ಲನೇಷನ್ ಕೊಡಬೇಕು. ಇದರ ವ್ಯಾಪ್ತಿ ಕೇವಲ ರೆಕಾರ್ಡೆಡ್ ಟನೆಂಟ್ ಅಪ್ಲಿಕೇಷನ್ ಹಾಕದೆ ಹೋದರೆ ಗವರ್ನಮೆಂಟ್ ಸ್ವಾಧೀನಕ್ಕೆ ಹೋಗುತ್ತದೆ. ಅಷ್ಟಕ್ಕೆ ಮಾತ್ರ ಸೀಮಿತವೋ ಅಥವಾ ವೈಡಲ್ ವ್ಯಾಪ್ತಿಗೆ ಬರುತ್ತದೆಯೇ ಎಂದು ಹೇಳಬೇಕು.

ಶ್ರೀ ಎಸ್.ಪಿ. ಮುದ್ದಹನುಮೇಗೌಡ : ಯಾರು ಅರ್ಜಿ ಹಾಕಲಿಲ್ಲ ಅವರಿಗೆ ಅವಕಾಶ ಮಾಡಿಕೊಡಬೇಕೆಂದು ತಾವು ಒಂದು ತಿದ್ದುಪಡಿ ತಂದಿದ್ದೀರಿ. ಅರ್ಜಿಯನ್ನು ಇಗ್ನೋರೆನ್ಸ್‌ನಿಂದ ಹಾಕದೆ ಇದ್ದರೆ ಒಪ್ಪಿಕೊಳ್ಳೋಣ. ಅವನು ಏಕೆ ಅರ್ಜಿ ಹಾಕಲಿಲ್ಲ ಎಂದು ಗೊತ್ತಾಗಬೇಕು. ಈ ರೂಲ್ಸ್ ಅಮೆಂಡ್‌ಮೆಂಟ್ ಮಾಡಿ ಅರ್ಜಿ ಜೊತೆಗೆ ಅವನು ಕಾರಣಗಳನ್ನೂ ಕೊಡಬೇಕು. ಸ್ಪಿಪ್ಯುಲೇಟೆಡ್ ಟೈಮ್‌ನಲ್ಲಿ ಏಕೆ ಅವನಿಗೆ ಅರ್ಜಿ ಹಾಕುವುದಕ್ಕೆ ಆಗಲಿಲ್ಲ? ಏಕೆಂದರೆ ನಾವು ಅವರಿಗೆ ಒಂದು ಅವಕಾಶ ಕೊಟ್ಟು ಉಪಯೋಗಿಸಿಕೊಳ್ಳದೆ ಇದ್ದುದರಿಂದ ಆ ಅವಕಾಶ ಏಕೆ ಉಪಯೋಗಿಸಿಕೊಳ್ಳುವುದಕ್ಕೆ ಆಗಲಿಲ್ಲ ಎನ್ನುವ ಕಾರಣವನ್ನು ಅರ್ಜಿ ಜೊತೆಯಲ್ಲಿ ನಮೂದು ಮಾಡುವುದು ಒಂದು. ಎರಡನೆಯದು ನಾವು ಟೆಕ್ನಿಕಲ್ ಗ್ರೌಂಡ್ಸ್ ಮೇಲೆ ಅಪ್ಲಿಕೇಷನ್ ರಿಜೆಕ್ಟ್ ಆಗಿ ಹೋಗುತ್ತದೆ.

He could not file the application within the prescribed period. He files the application subsequent to that date. But his application is rejected. His case is not considered on merits. ಇಂತಹ ಕೇಸನ್ನು ತೋರಿಸದೆ ಹೋದರೆ ತುಂಬ ಅನ್ಯಾಯವಾಗುತ್ತದೆ. ಏಕೆಂದರೆ ಅವನು ಯಾವುದೋ ಒಂದು ಕಾರಣದಿಂದ ಸ್ವಲ್ಪ ತಡವಾಗಿ ಅರ್ಜಿ ಹಾಕಿ ಆ ಗ್ರೌಂಡ್ಸ್ ಮೇಲೆ ಅಪ್ಪರಲ್ಲಿ ಅವನ ಅಪ್ಲಿಕೇಷನ್ ರಿಜೆಕ್ಟ್ ಆಗಿದ್ದರೆ ಮೆರಿಟ್ ಹೇಗೆ ಮಾಡಿದ ಹಾಗಾಗುತ್ತದೆ, ದಯಮಾಡಿ ಇಲ್ಲಿ ಸರಿಪಡಿಸಬೇಕಾಗುತ್ತದೆ.

MR. SPEAKER : That point has been made very clear by hon. member Smt. Pramila Nesargi. Any other matter that has come up for consideration

before the tribunal and decided on merits, subsequently taken to the Appellate Authority and had its final findings will not come up before the Deputy Commissoner. Those people who could not file their application or the application filed is belated, it is as good as the application is not filed. There is no clarification. Law should always be in favour of those who are weak and meak. We should have the courage to interpret any law especially in favour of the oppressed and exploited people

ಶ್ರೀ ಡಿ.ಕೆ. ಶಿವಕುಮಾರ್ : ಇದು ನಮ್ಮ ಸೋಮಶೇಖರ್ ಅವರ ಕೂಸು ಅಲ್ಲ. ಅವರು ಸರಿಯಾಗಿ ಇದನ್ನು ಅಧ್ಯಯನ ಮಾಡಿದ್ದರೆ ಬಹುಶಃ ಈ ಒಂದು ಅಮೆಂಡ್‌ಮೆಂಟ್‌ನ್ನು ತರುತ್ತಿರಲ್ಲಿಲ್ಲ. ಯಾರೋ ಹಿಂದೆ ರೆಡಿ ಮಾಡಿ ಇಟ್ಟಿದ್ದಾರೆ, ಇದನ್ನು ತಂದು ಬಿಟ್ಟಿದ್ದಾರೆ. ಇದು ನನಗೆ ಬಹಳ ಭಯವಾಗುತ್ತಿದೆ. ಬೆಂಗಳೂರು ಸಿಟಿಯಲ್ಲಿ ಲ್ಯಾಂಡ್ ಗ್ರ್ಯಾಬರ್ಸ್‌ಗೆ ಅನುಕೂಲ ಮಾಡಿಕೊಡುವುದಕ್ಕೆ ತಂದಂತಹ ಒಂದು ಬಿಲ್ ಎಂದು ನಾನು ಸಂಪೂರ್ಣವಾಗಿ ಘಂಟಾಘೋಷವಾಗಿ ಹೇಳುತ್ತೇನೆ. ಇದನ್ನು ನಾನು ವಿರೋಧ ಮಾಡುತ್ತೇನೆ. ಎರಡನೆಯದು ಏನು ಹಿಂದೆ ಅರಸು ಮಾಡಿದ್ದರು ಅದನ್ನು ಸಂಪೂರ್ಣವಾಗಿ ನಾನು ಒಪ್ಪಿಕೊಳ್ಳುತ್ತೇನೆ. ನಾನು ಏಕೆ ಹೇಳುತ್ತೇನೆಂದರೆ, ಹಳ್ಳಿಯವರಿಗೆ ಅನುಕೂಲ ಆಗುವುದಿದ್ದರೆ ಬೇರೆ. ಇದು ಸಂಪೂರ್ಣ ಬೆಂಗಳೂರು ಸಿಟಿಗೆ ಸಂಬಂಧಪಟ್ಟಿದ್ದಾಗಿದೆ. ಎಂಟು- ಹತ್ತು ಜನ ನಮ್ಮ ರೆವಿನ್ಯೂ ಮಿನಿಸ್ಟರ್ ಆಫೀಸ್‌ನಲ್ಲಿ ಓಡಾಡುತ್ತಿದ್ದರು, ಬೆಂಗಳೂರು ಸಿಟಿ ಕಾರ್ಪೊರೇಷನ್ ಲಿಮಿಟ್ ಒಳಗೆ 30 ಎಕರೆ, 40 ಎಕರೆ ಇವತ್ತು ಅರ್ಜಿ ಹಾಕಿಕೊಳ್ಳುವುದಕ್ಕೆ ಆಗದೆ ಬೇಕಾದಷ್ಟು ತಾರತಮ್ಯ ಆಗಿ ಅವರ ಹೆಸರಿಗೆ ಬರೀ 10 ಎಕರೆ ಮಾಡಿಕೊಂಡು, ಆ ಮೇಲೆ ಅವರ ಶಿಷ್ಯರ ಹೆಸರಿಗೆ ಎರಡು-ಮೂರು ಎಕರೆ ಹಾಕಿ ಅವರ ಹೆಸರಿಗೆ ಪಾಣಿ ಮೇಲೆ ಪಟೇಲರಾಗಿದ್ದುಕೊಂಡು ಅವರ ಹೆಸರಿಗೆ ಪಾಣಿಗಳನ್ನು ಬರೆದುಕೊಂಡು. ಅವತ್ತು ಅರ್ಜಿಗಳನ್ನು ಹಾಕದೆ, ಇವತ್ತು ಅವಕಾಶ ಪಡೆದುಕೊಳ್ಳುವುದಕ್ಕೆ ಒತ್ತಡ ತಂದು ಮಾಡಿರತಕ್ಕಂತಹ ಒಂದು ಅಮೆಂಡ್‌ಮೆಂಟ್ ಎಂದು ನಾನು ತಿಳಿದುಕೊಂಡಿದ್ದೇನೆ.

ಶ್ರೀ ಬಿ. ಸೋಮಶೇಖರ್ : ಹೊಸದಾಗಿ ಅರ್ಜಿ ಹಾಕುವುದಕ್ಕೆ ಅವಕಾಶವಿಲ್ಲ.

ಶ್ರೀ ಡಿ.ಕೆ. ಶಿವಕುಮಾರ್ : ಇವತ್ತು ಕಾರ್ಪೊರೇಷನ್‌ನ ಲಿಮಿಟ್‌ನಲ್ಲಿ ಅವರೇ ಪೊಸೆಷನ್‌ನಲ್ಲಿದ್ದಾರೆ. ಬಿಲ್ಡಿಂಗ್ ಕಟ್ಟಿಕೊಂಡಿದ್ದಾರೆ.

ಶ್ರೀ ಬಿ. ಸೋಮಶೇಖರ್ : ಟೆನೆಂಟ್ಸ್ ಯಾರೂ ಕಟ್ಟಿಕೊಂಡಿಲ್ಲ.

ಶ್ರೀ ಡಿ.ಕೆ. ಶಿವಕುಮಾರ್ : ನೀವು ಒಂದು ಸಮಿತಿ ಮಾಡಿ ನಾನು ಕರೆದುಕೊಂಡು ಹೋಗುತ್ತೇನೆ. ಬೆಂಗಳೂರು ಸಿಟಿಯಲ್ಲಿ 40 ಎಕರೆ ಜಮೀನು ಇದೆ. 13 ಎಕರೆ ಅವರ ಹೆಸರಿಗೆ ಆಯಿತು, 33 ಎಕರೆ ಅವರ ಹೆಸರಿಗೆ ಪಾಣಿ ಇದೆ. ಅವನು ಹಾಕಿಕೊಳ್ಳುವುದಕ್ಕೆ ಆಗಲಿಲ್ಲ, ಅವನು ಅವರ ಜನರಿಗೆ 3-3 ಎಕರೆ ಹಾಕಿಸಿದ. ಅವರಿಗೂ ಇವರಿಗೂ ಸರಿ ಹೋಗಲಿಲ್ಲ. ಈಗ ಮತ್ತೆ

ಏನಾದರೂ ಮಾಡಿ ಅವಕಾಶ ಸಿಕ್ಕರೆ ಅವನು ಹೆಸರಿಗೆ ಅರ್ಜಿ ಹಾಕಿಕೊಳ್ಳುವ ಪರಿಸ್ಥಿತಿ. ಆ ಬಡವನ ಪರಿಸ್ಥಿತಿ ಏನಾಗಬಹುದು.

ಶ್ರೀ ಬಿ. ಸೋಮಶೇಖರ್ : ಅರ್ಜಿ ಹಾಕಿಕೊಳ್ಳುವುದಕ್ಕೆ ಅವಕಾಶವಿಲ್ಲ. ನೀವು ತಪ್ಪು ತಿಳಿದುಕೊಂಡಿದ್ದೀರಿ. ಇಲ್ಲಿ ತಂದಿರತಕ್ಕಂತಹ ಉದ್ದೇಶ ಬೇರೆ. ಅವರು ತಿಳಿದುಕೊಂಡಿರತಕ್ಕಂಥದ್ದು ಬೇರೆ.

ಶ್ರೀ ಡಿ.ಕೆ. ಶಿವಕುಮಾರ್ : ಹಳ್ಳಿಯ ಬಡವರಿಗೆ ಏನಾದರೂ ಅನುಕೂಲ ಆಗುವುದಿದ್ದರೆ ನಾವು ಒಪ್ಪುತ್ತಿದ್ದೆವು.

ಶ್ರೀ ಬಿ. ಸೋಮಶೇಖರ್ : ಬಡವರಿಗೆ, ರೈತರಿಗೆ ಅನುಕೂಲವಾಗಬೇಕೆಂದು ಮಾಡಿರುವುದು.

12.20 ಪಿ.ಎಂ

ಶ್ರೀ ಡಿ.ಕೆ. ಶಿವಕುಮಾರ್ : ನೀವೇನೋ ಹೇಳುತ್ತೀರಿ, ಟ್ರಿಬ್ಯುನಲ್‌ನಲ್ಲಿ ರೈತರ 40 ಎಕರೆವರೆಗೂ ಪಾಸ್ ಮಾಡಿಸಿದ್ದೇವೆ ಎಂದು ಹೇಳುತ್ತೀರಿ. ಆದರೆ 40 ಎಕರೆಯಲ್ಲಿ ಒಬ್ಬ ರೈತ ಉಳುವುದಕ್ಕೆ ಸಾಧ್ಯವೇ? ನೀವು ಇದರ ಬಗ್ಗೆ ಸ್ವಲ್ಪ ಯೋಚನೆ ಮಾಡಿ ಹೇಳಿ? ಅದೂ ಈ ಬೆಂಗಳೂರು ನಗರದಲ್ಲಿ. ನೀವು ನಮಗೆ ವಿವರ ಕೊಡಿ, ಬೆಂಗಳೂರು ಸಿಟಿಯಿಂದ, ಬೆಂಗಳೂರು ಗ್ರಾಮಾಂತರದಿಂದ, ಮಂಡ್ಯ ಜಿಲ್ಲೆಯಿಂದ ಹಾಗೂ ಇನ್ನಿತರ ಕಡೆಗಳಿಂದ ಇಷ್ಟಿಷ್ಟು ಅರ್ಜಿಗಳು ಬಂದಿವೆ ಎಂಬ ಬಗ್ಗೆ ಹೇಳಿ. ಅಂದು ಜಮೀನು ವಜಾ ಆದಾಗ ಆ ರೈತ ಇರಲಿಲ್ಲ, ಆದರೆ ಇನ್ನೊಬ್ಬ ಬೇರೆಯವರಿಗೆ ಜಮೀನನ್ನು ಮಾಡಿಕೊಂಡಿರುತ್ತಾನೆ ಎಂದಿಟ್ಟುಕೊಳ್ಳಿ, 1974ರಿಂದ ಆತನ ಹೆಸರಿನಲ್ಲಿ ಪಹಣಿ ಇರುತ್ತದೆ, ಮುರ್ನಾಲ್ಕು ಟ್ರಾನ್ಸಾಕ್ಷನ್ ಆಗಿದೆ, ಹೀಗಿರುವಾಗ ಆ ರೈತನ ಪರಿಸ್ಥಿತಿ ಏನಾಗಬೇಕು ಹೇಳಿ? ಜಮೀನ್ದಾರ ಏನೋ ಅಡ್ಜೆಸ್ಟ್‌ಮೆಂಟ್ ಮಾಡಿಕೊಂಡು ಬೇರೆ ಮೂರ್ನಾಲ್ಕು ಜನರಿಗೆ ಆ ಜಮೀನನ್ನು ಮಾರಿಬಿಟ್ಟಿರುತ್ತಾನೆ. ಆದರೆ ಇಂದು ಪಹಣಿ ಅವರುಗಳ ಹೆಸರಿನಲ್ಲಿ ಇಲ್ಲ, ಆದರೆ ಇಂದು ಆ ಜಮೀನನ್ನು ಅವರ ಹೆಸರಿನಲ್ಲಿ ಮಾಡಿಕೊಡಬೇಕು ಎಂದರೆ ಹೇಗೆ ಸಾಧ್ಯ? ರೈತರಿಗೆ ಅನುಕೂಲವಾಗುವಂತೆ ಇದು ಇದ್ದಿದ್ದರೆ ನಾನು ಸಂಪೂರ್ಣವಾಗಿ ಒಪ್ಪಿಕೊಳ್ಳುತ್ತಿದ್ದೆ.

ಅಧ್ಯಕ್ಷರು : ಶಿವಕುಮಾರ್‌ರವರು ಏನು ಹೇಳುತ್ತಿದ್ದಾರೋ ಅದು ನನಗೆ ಅರ್ಥವಾಗಲಿಲ್ಲ. ನಂಜೇಗೌಡರೇ ನಿಮಗೇನಾದರೂ ಅರ್ಥವಾಯಿತೆ?

ಶ್ರೀ ಹೆಚ್.ಎನ್. ನಂಜೇಗೌಡ : ಮಾನ್ಯ ಅಧ್ಯಕ್ಷರೇ, ಮಂತ್ರಿಗಳು ಇಷ್ಟನ್ನು ಕ್ಲಾರಿಫೈ ಮಾಡಿಬಿಡಿಲಿ this applies to lands vested in the government. ಅಷ್ಟಕ್ಕೆ ಸೀಮಿತವಾಗಿದೆಯೇ ಎಂಬುದನ್ನು ಹೇಳಿ.

ಶ್ರೀ ಸಿದ್ದರಾಮಯ್ಯ (ಉಪಮುಖ್ಯಮಂತ್ರಿಗಳು) : ಆ ರೀತಿ ಇಲ್ಲ.

SRI KAGODU THIMMAPPA : Presumed to be a tenant if it is a tenanted land...

SRI B. SOMASHEKAR : Under Section-44 they continue to be vested

with the government, but tenants are in enjoyment of such lands. It is in possession of tenants, but in records the lands are with the government.

ಶ್ರೀ ಡಿ.ಕೆ. ಶಿವಕುಮಾರ್ : ಹಾಗಾದರೆ ಇದುವರೆಗೆ ಎಷ್ಟು ಅರ್ಜಿಗಳು ಬಂದಿವೆ? ಎಷ್ಟಕ್ಕೆ ಸರ್ವೆ ಮಾಡಿದ್ದೀರಿ? ನಿಮ್ಮ ಬಳಿ ರಿಪೋರ್ಟ್ ಇದೆಯೇ? ಇಷ್ಟು ಜನರು ಇದ್ದಾರೆ ಎಂಬ ಬಗ್ಗೆ ನಿಮ್ಮ ಹತ್ತಿರ ಮಾಹಿತಿ ಇದೆಯೇ? ಏಕೆ ಈ ಬಿಲ್‌ನ್ನು ತಂದಿರಿ ಎಂಬ ಬಗ್ಗೆ ಹೇಳಿ.

ಶ್ರೀ ಬಿ. ಸೋಮಶೇಖರ್ : ತಮಗೇನಾದರೂ ಬೆಂಗಳೂರು ಸಿಟಿ ಬಗ್ಗೆ ಅನುಮಾನವಿದ್ದರೆ ಅದಕ್ಕೆ ನಾನು ಸ್ಪಷ್ಟೀಕರಣವನ್ನು ಕೊಡುತ್ತೇನೆ. ಬೆಂಗಳೂರು ಮತ್ತು ಇತರ ನಗರಗಳಲ್ಲಿ ಏನೇನು ಭೂಮಿ ಕಾಯಿದೆ ಇದೆ ಅದನ್ನು ಹೊರತುಪಡಿಸಿ ಇದನ್ನು ಮಾಡಿರುವುದು. ನಮ್ಮ ಉದ್ದೇಶ ಬೆಂಗಳೂರು ಸುತ್ತಮುತ್ತ ಭೂಮಿಯನ್ನು ಯಾರು ದೋಚಿಕೊಂಡಿದ್ದಾರೆ ಅವರಿಗೆ ಭೂಮಿಯನ್ನು ಕೊಡಬೇಕು ಎಂಬುದಲ್ಲ.

(ಗೊಂದಲ)

ಅಧ್ಯಕ್ಷರು : ಶಿವಕುಮಾರ್‌ರವರೇ, ನೀವು ಒಬ್ಬ ಸದಸ್ಯರಾಗಿ ಏನು ಅನುಮಾನವನ್ನು ವ್ಯಕ್ತಪಡಿಸಿದ್ದೀರಿ ಅದು ತಮ್ಮ ಹಕ್ಕಾಗಿದೆ. ಅದಕ್ಕೆ ಆಧಾರ ಇದೆ. ಆ ಅನುಮಾನಕ್ಕೆ ಉತ್ತರ ಕೊಡಬೇಕಾದ ಜವಾಬ್ದಾರಿಯೂ ಕೂಡ ಸರ್ಕಾರಕ್ಕಿದೆ. ಸರ್ಕಾರ ಅದಕ್ಕೆ ಏನು ಹೇಳುತ್ತದೆಂದರೆ ಹಾಗೇನಾದರೂ ಆದರೆ ನಗರಸಭೆಯ ವ್ಯಾಪ್ತಿಯಲ್ಲಿ ಬರತಕ್ಕಂಥ ಜಮೀನನ್ನು ಹೊರತುಪಡಿಸಿ ಎಂದು ಸ್ಪಷ್ಟೀಕರಣವನ್ನು ಮಾಡುತ್ತೇವೆ ಎನ್ನುತ್ತಿದ್ದಾರೆ.

(ಗೊಂದಲ)

ಶ್ರೀ ಬಿ. ಸೋಮಶೇಖರ್ : ಮಾನ್ಯ ಶಿವಕುಮಾರ್‌ರವರೇ, ಬೆಂಗಳೂರು ನಗರದಲ್ಲಿ ಭೂಮಿಯನ್ನು ದೋಚಿಕೊಳ್ಳಬೇಕು ಎನ್ನುವವರಿಗೆ ನಮ್ಮ ಸರ್ಕಾರ ಸಹಾಯ ಮಾಡುವುದಿಲ್ಲ.

(ಗೊಂದಲ)

ಶ್ರೀ ಸಿ. ಭೈರೇಗೌಡ (ಕೃಷಿ ಸಚಿವರು) : ಮಾನ್ಯ ಅಧ್ಯಕ್ಷರೇ, ನಾವು ಈಗ ಆಕ್ಟ್‌ಗೆ ಅಮೆಂಡ್‌ಮೆಂಟನ್ನು ತಂದಿರತಕ್ಕಂಥದ್ದು. ನಾವು ಆಕ್ಟ್ ಕೆಳಗಡೆ ರೂಲ್ಸ್ ಮಾಡುವುದಕ್ಕೆ ಅವಕಾಶವಿದೆ. ಇವೆಲ್ಲವನ್ನೂ ಕೂಡ ರೂಲ್ಸ್‌ನಲ್ಲಿ ತರುತ್ತಿದ್ದೇವೆ.

(ಗೊಂದಲ)

ಶ್ರೀ ಬಿ. ಸೋಮಶೇಖರ್ : ನನಗೆ ಈ ಪದವಿ ಸಿಕ್ಕಿರುವವರೆವಿಗೂ ವಿರೋಧಪಕ್ಷದವರು ಯಾವುದೇ ರೀತಿಯ ಅನುಮಾನ ಪಡಬೇಕಾಗಿಲ್ಲ. ನಾನು ಎಂದಿಗೂ ಪಟ್ಟಭದ್ರ ಹಿತಾಸಕ್ತಿಗಳ ಪರವಾಗಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಹಾಗಾದರೆ ಈ ಬಗ್ಗೆ ಕಾನೂನು ತೆಗೆದುಕೊಂಡು ಬನ್ನಿ.

ಶ್ರೀ ಬಿ. ಸೋಮಶೇಖರ್ : ಇವ್ಹೊತ್ತೇ ತರೋಣ, ಅದರ ಬಗ್ಗೆ ಅಫಿಷಿಯಲ್ ಅಮೆಂಡ್‌ಮೆಂಟ್ ಮೂವ್ ಮಾಡುತ್ತೇನೆ, ಅದರ ಬಗ್ಗೆ ಕಾನೂನು ಮಾಡೋಣ.

ಅಧ್ಯಕ್ಷರು : ಇದೊಂದು ಮಹತ್ವವಾದಂಥ ವಿಚಾರವಾಗಿದೆ. ಇದರಲ್ಲಿ ಸರ್ಕಾರ, ವಿರೋಧ ಪಕ್ಷವೆಂತಾಗಲೀ ಅಥವಾ ನಾನು ಅಥವಾ ನೀವು ಎಂಬ ಪ್ರಶ್ನೆ ಬರುವುದಿಲ್ಲ. ಈ ಸದನದ ಯಾವುದೇ ಒಬ್ಬ ಸದಸ್ಯರೂ ಕೂಡ ಅಂಥ ಒಂದು ಕ್ರಮಕ್ಕೆ ಕುಮ್ಮಕ್ಕು ಕೊಡುವುದಕ್ಕೆ ಇಲ್ಲಿ ಕುಳಿತಿಲ್ಲ, ಆ ರೀತಿಯ ಕುಮ್ಮಕ್ಕು ಕೊಡಬಾರದು, ಏಕೆಂದರೆ ಅದು ಸದನದ ಜವಾಬ್ದಾರಿ ಕೂಡ ಇಲ್ಲ. ಆದರೆ ಈ ಅಂಶವನ್ನು ತಿದ್ದುಪಡಿ ಮುಖಾಂತರ ತರಬೇಕೇ ಅಥವಾ ಕಾನೂನಿಗೆ ಬದಲಾವಣೆ ತರಬೇಕೇ ಎಂಬುದನ್ನು ಕಾನೂನು ಇಲಾಖೆಯ ಕಾರ್ಯದರ್ಶಿಯವರೊಡನೆ ಮಾತನಾಡಿ ತೆಗೆದುಕೊಂಡು ಬನ್ನಿ. ಆದರೆ ಸರ್ಕಾರ ಈ ಸಂದರ್ಭದಲ್ಲಿ ಒಂದು ಕಮಿಟ್‌ಮೆಂಟನ್ನು ಮಾಡಿಕೊಂಡಿದೆ, ಯಾವ ಕಾರಣಕ್ಕೂ ಕೂಡ ನಗರ ವ್ಯಾಪ್ತಿಯೆಲ್ಲಿ ಬರತಕ್ಕಂಥ ಜಮೀನನ್ನು ಈ ತಿದ್ದುಪಡಿಯ ವ್ಯಾಪ್ತಿಗೆ ತರುವುದಿಲ್ಲ ಎನ್ನತಕ್ಕಂಥ ಸ್ಪಷ್ಟೀಕರಣವನ್ನು ಕೊಟ್ಟಿದೆ. ಇದಕ್ಕೆ ಸಂಬಂಧಪಟ್ಟಂತೆ ತಿದ್ದುಪಡಿಯನ್ನು ತರಬೇಕೇ ಅಥವಾ ರೂಲ್‌ನ್ನು ಮಾಡಬೇಕೇ ಎಂಬ ಬಗ್ಗೆ ಮಾತನಾಡಿಕೊಂಡು ಸೋಮವಾರ ಈ ಬಿಲ್‌ನ್ನು ತೆಗೆದುಕೊಂಡು ಬನ್ನಿ. ನಾನು ಹೇಳುವುದೇನೆಂದರೆ ರೂಲ್‌ನಲ್ಲಿಯೇ ಇದಕ್ಕೆ ಅವಕಾಶ ಮಾಡಿಕೊಳ್ಳಬಹುದು ಎಂದರೆ ಸಂತೋಷ. If an amendment is required we can take it up on Monday. The Government stand is very clear. Your object is only to help those unfortunate people.

ಶ್ರೀ ಹೆಚ್.ಎನ್. ನಂಜೇಗೌಡ : ಲ್ಯಾಂಡ್ ರೆವಿನ್ಯೂ ಆಕ್ಟ್‌ನಲ್ಲಿ ಇಷ್ಟಿಷ್ಟು ಕಿ.ಮೀ. ಎಂದು ನಿಗದಿಪಡಿಸಿದ್ದಾರೆ. ಅದೇ ರೀತಿಯಲ್ಲಿ ಇದರಲ್ಲೂ ಏಕೆ ನೀವು ಮಾಡಬಾರದು? ಆ ರೀತಿ ಮಾಡಿದರೆ ಕನ್‌ಫ್ಯೂಶನ್ ಇರುವುದಿಲ್ಲ.

ಶ್ರೀ ಬಿ. ಸೋಮಶೇಖರ್ : ನಮ್ಮ ಉದ್ದೇಶ ಮತ್ತು ನಿಮ್ಮ ಉದ್ದೇಶ ಮತ್ತ ಎಲ್ಲರ ಉದ್ದೇಶವೂ ಒಂದೇ ಆಗಿದೆ.

ಶ್ರೀ ಡಿ.ವಿ. ಸದಾನಂದಗೌಡ : ನಗರಮಿತಿಯಲ್ಲಿರುವಂಥ ಟೆನೆಂಟ್‌ಗಳ ಪರಿಸ್ಥಿತಿ ಏನು ಎಂಬ ಬಗ್ಗೆ ಮಂತ್ರಿಗಳು ಹೇಳಬೇಕು. ಎಕ್ಸ್‌ಟೆಂಡ್ ಏರಿಯಾದಲ್ಲಿರುವಂಥವರ ಪರಿಸ್ಥಿತಿ ಏನು ಹೇಳಿ? ಆದುದರಿಂದ, ಅದನ್ನು ನೀವು ಆ ಎಕ್ಸ್‌ಟೆಂಡೆಡ್ ಏರಿಯಾ ಪ್ರಿನ್ಸಿಪಲ್‌ನ್ನು ಬಿಟ್ಟು ಹಿಂದೆ ಏನು ನಗರವ್ಯಾಪ್ತಿ ಎಂದು ಇತ್ತೋ ಅದನ್ನು ನೀವು ಮಾಡಿ.

ಅಧ್ಯಕ್ಷರು : ಸದಾನಂದಗೌಡರೇ, ಈಗ ಈ ವಿಚಾರದಲ್ಲಿ ಕೊಕ್ಕೆ ಹಾಕಿ ಎಳೆಯುವುದು ಬೇಡ, Let us try to help these tenants. ಏನಾದರೂ ಮಾಡಿ ಇದಕ್ಕೆ ಪರಿಹಾರ ಕಂಡುಹಿಡಿಯೋಣ.

ಶ್ರೀ ಬಿ. ಸೋಮಶೇಖರ್ : ಅಧ್ಯಕ್ಷರೇ, ತಾವು ಹೇಳಿದ ಹಾಗೆ ಅಮೆಂಡ್‌ಮೆಂಟನ್ನು ಆಕ್ಟ್‌ನಲ್ಲಿಯೇ ತರಬೇಕೇ ಅಥವಾ ರೂಲ್ಸ್‌ನಲ್ಲಿಯೇ ತಂದರೆ ಸಾಕೇ ಎಂಬ ಬಗ್ಗೆ ನೋಡಬೇಕಾಗುತ್ತದೆ.

ಶ್ರೀ ಡಿ.ಕೆ. ಶಿವಕುಮಾರ್ : ಆಕ್ಟ್‌ನಲ್ಲಿಯೇ ತರಬೇಕು.

ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯಮಂತ್ರಿಗಳು) : ಈಗಿರುವುದರಲ್ಲಿಯೇ ಸರ್ಕಾರಕ್ಕೆ ಪವರ್ಸ್ ಇದೆ, ಆದರಲ್ಲಿ ಏನು ಹೇಳುತ್ತದೆಂದರೆ "He may grant the land to such person subject to such restrictions and conditions and in the manner as may be prescribed." ಎಂದು ರೂಲ್ಸ್ ಇದೆ. ಹಾಗೆ ರೂಲ್ಸನ್ನು ಮಾಡಿಕೊಳ್ಳಬಹುದು.

SRI KAGODU THIMMAPPA : You have to amend the act.

ಶ್ರೀ ಸಿದ್ಧರಾಮಯ್ಯ : ರೂಲ್ಸ್ ಪ್ರಕಾರ ಮಾಡಬಹುದೇ ಅಥವಾ ಅಮೆಂಡ್‌ಮೆಂಟ್ ತಂದು ಮಾಡಬಹುದೇ ಎಂಬುದನ್ನು ಕಾನೂನಿನ ಕಾರ್ಯದರ್ಶಿಯವರೊಡನೆ ಕ್ಲಾರಿಫಿಕೇಷನ್ ಕೇಳಿ ಮಾಡುತ್ತೇವೆ.

ಅಧ್ಯಕ್ಷರು : ಜಯರಾಮಶೆಟ್ಟರೇ, ನೀವು ಏಕೆ ಎದ್ದು ನಿಂತಿರಿ. ಈಗಾಗಲೇ ಈ ಬಗ್ಗೆ ನಿಮ್ಮ ಪಕ್ಷದ ಪ್ರಮೀಳಾರವರು, ಸದಾನಂ ಗೌಡರು ಮಾತನಾಡಿದ್ದಾರೆ.

ಶ್ರೀ ಕೆ. ಜಯರಾಮಶೆಟ್ಟಿ : ನಾನು ನನ್ನ ಜಿಲ್ಲೆಗೆ ಸಂಬಂಧಪಟ್ಟಂತೆ ಕೇಳುತ್ತೇನೆ. ಈಗ ಏನು ಕಾನೂನು ತಂದಿದ್ದರೆ ಅದನ್ನು ನಾನು ಸ್ವಾಗತ ಮಾಡುತ್ತೇನೆ. ಆದರೆ ಇದರಲ್ಲಿ ಒಂದು ಕುಟುಂಬದ ಜಾಗವನ್ನು ಆ ಅಳಿಯ, ಅತ್ತೆ ಅಥವಾ ಆತನ ಹೆಂಡತಿ, ಇಬ್ಬರೂ ಸೇರಿಕೊಂಡು ಕುಟುಂಬದ ಜಾಗವನ್ನು ದುರುಪಯೋಗ ಮಾಡುವಂಥ ಬಹಳಷ್ಟು ಘಟನೆಗಳು ನಡೆದಿವೆ. ಆದುದರಿಂದ ತಾವು ರೂಲ್ಸ್‌ನ್ನು ತರುವಾಗ ಇದರ ಬಗ್ಗೆ ಸೇರಿಸಿ ರೂಲ್ಸ್ ಮಾಡಬೇಕು. ಇನ್ನು ಭೂಮಿಯ ಬಗ್ಗೆ ಯಾರು ಅರ್ಜಿ ಕೊಟ್ಟಿರುತ್ತಾರೋ ಅವರಿಗೇ ಕೊಡುವಂಥ ವ್ಯವಸ್ಥೆ ಆಗಬೇಕು

ಅಧ್ಯಕ್ಷರು : ಈಗ ಬಿಲ್ ಪಾಸ್ ಮಾಡೋಣ, ಅಮೆಂಡ್‌ಮೆಂಟನ್ನು ಸೋಮವಾರ ತೆಗೆದುಕೊಂಡು ಬನ್ನಿ.

ಶ್ರೀ ಹೆಚ್. ಜಿ. ಬಾಲಕೃಷ್ಣ : ನಾನು ಹೇಳುವಂಥಾದ್ದು ಏನೆಂದರೆ ಅರ್ಜಿಯನ್ನು ಹಾಕಿ ಅದು ರಿಜೆಕ್ಟ್ ಆಗಿದ್ದರೆ ಮತ್ತೆ ಅವನು ಹೊಸ ಅರ್ಜಿ ಹಾಕುವುದು ಬೇಡ. ಆದರೆ ಅರ್ಜಿಯನ್ನು ಹಾಕಿ ಅವನ ಅರ್ಜಿಯನ್ನು ಬಲವಂತವಾಗಿ ವಾಪಸ್ಸು ತೆಗೆಸಿದ್ದರೆ ಅವನಿಗೆ ಸರ್ಕಾರ ಪುನಃ ಅರ್ಜಿ ಹಾಕುವುದಕ್ಕೆ ಅವಕಾಶಕೊಡಬೇಕು.

ಶ್ರೀ ಬಿ. ಸೋಮಶೇಖರ್ : ಹಾಗೆ ಪೊಸಿಷನ್‌ನಲ್ಲಿ ಇದ್ದರೆ ಅಂತಹವರಿಗೆ ಮಾಡುವುದಕ್ಕೆ ಅವಕಾಶ ಇದೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಈಗಾಗಲೇ ಟ್ರಿಬ್ಯೂನಲ್ ಮುಂದೆ ಇರುವ ಕೇಸುಗಳಲ್ಲಿ ಕೆಲವು ಜಮೀನುಗಳು ಇನಾಂ ಲ್ಯಾಂಡ್‌ನಲ್ಲಿ ದೇವಾದಾಯ ಧರ್ಮಾದಾಯ ಕೆಟಗರೀಸ್ ಲ್ಯಾಂಡ್ ಬಂದಿದೆ. ಅದನ್ನು ನಿಮ್ಮ ಅಸಿಸ್ಟೆಂಟ್ ಕಮೀಷನರ್ ಮಂಜೂರು ಮಾಡುವುದಕ್ಕೆ ಆಗುತ್ತಿಲ್ಲ. ಪ್ರತಿ ಸಲ

ಟ್ರಿಬ್ಯೂನಲ್ ಕರೆಯುವುದು, ಕೇಸನ್ನು ಮುಂದಕ್ಕೆ ಹಾಕಿಕೊಂಡು ಹೋಗುವುದು ಮಾಡಿ, ಸುಮ್ಮನೆ ಒಂದೊಂದು ವರ್ಷದಲ್ಲಿ 15-16 ಕೇಸ್‌ಗಳು ಟ್ರಿಬ್ಯೂನಲ್ ಮುಂದೆ ನಡೆಯುತ್ತಿವೆ. ಆ ಕೆಟಗರೀಸ್ ಲ್ಯಾಂಡನ್ನು ರಿಲೀಜ್ ಮಾಡಿಬಿಟ್ಟು ಏನಾದರೂ ಮಂಜೂರು ಮಾಡುವುದಕ್ಕೆ ತಾವು ಮುಂದೆ ಇಂಟ್ರಡ್ಯೂಸ್ ಮಾಡುವ ಬಿಲ್‌ನಲ್ಲಿ ಕೊಡುತ್ತೀರಾ? ತಾವು ಈಗಾಗಲೇ ಡಿಸಿಷನ್ ತೆಗೆದುಕೊಂಡು ಈ ಲ್ಯಾಂಡನ್ನು ಬೇರೆಯವರಿಗೆ ಬೇರೆ ಪರ್ಪಸ್‌ಗೆ ಕೊಟ್ಟಿದ್ದರೆ, ಏಕೆಂದರೆ, 1974ಕ್ಕೆ ನಿಂತುಹೋಯಿತು. ಟೆನೆಂಟ್ಸ್‌ಗೆ ಅಪ್ಲಿಕೇಷನ್ ತೆಗೆದುಕೊಳ್ಳುವುದು. 1979ರಿಂದೀಚೆಗೆ ಪಾಣಿ ಬರೆದಿಲ್ಲ. 1984ರಿಂದ ರದ್ದು ಮಾಡಿಬಿಟ್ಟು ಅಸಿಸ್ಟೆಂಟ್ ಕಮಿಷನರ್‌ಗೆ ಕಾಲಂ ನಂ.9 ಕಾಲಂ ನಂ. 12 ಕಾಮನ್ ಆಗಿ ಇರಬೇಕು ಎನ್ನುವ ಕಾಲದಲ್ಲಿ ತಾವು ಕೆಲವು ಲ್ಯಾಂಡನ್ನು ಫಾರೆಸ್ಟ್‌ಗೆ ಹ್ಯಾಂಡ್‌ಓವರ್ ಮಾಡಿದ್ದೀರಿ. ಕೆಲವು ಲ್ಯಾಂಡನ್ನು ಬೇರೆಯವರಿಗೆ ಎನ್‌ಟ್ರಸ್ಟ್ ಮಾಡಿದ್ದೀರಿ. ಆದರೆ ಟೆನೆಂಟ್ಸ್‌ಗೆ ಬಿಟ್ಟಿದ್ದೀರೋ ಇಲ್ಲವೋ ಗೊತ್ತಿಲ್ಲ. ಅವರು ಈಗಾಗಲೇ ಅದರ ಮೇಲೆ ಆಕ್ಟಿವಿಟೀಸ್ ಸ್ಟಾರ್ಟ್ ಮಾಡಿದ್ದರೆ. ಆ ಲ್ಯಾಂಡನ್ನು ಏನು ಮಾಡುತ್ತೀರಿ ಎಂದಾದರೂ ಹೇಳಬೇಕಾಗುತ್ತದೆ. ತೋಟಗಳು ಇವೆ. ಆದರೆ ಫಾರೆಸ್ಟ್‌ನವರು ನಮ್ಮದು ಎಂದು ಬೌಂಡ್ರಿ ಟ್ರೆಂಚ್ ಹೊಡೆದಿದ್ದಾರೆ. ಇಂತಹ ಕೆಟಗರಿ ಲ್ಯಾಂಡ್‌ಗೆ ನೀವು ಇನ್‌ಸ್ಪೆಕ್ಷನ್‌ಗೆ ಹೋದರೆ ಟೆನೆಂಟ್ ಇರುತ್ತಾನೆ. It is already handed over to someother purpose. ಆ ಜಮೀನಿನ ಪರಿಸ್ಥಿತಿ ಏನಾಗಬೇಕು? ರಿಸ್ಟ್ರಿಕ್ಟೆಡ್ ಲ್ಯಾಂಡ್ ಏನಿದೆ ಧರ್ಮದಾಯ, ದೇವಾದಾಯ ಎಂದು ಆ ಇನಾಂ ಲ್ಯಾಂಡ್ಸನ್ನು ನೀವು ರಿಲೀಜ್ ಮಾಡಿ ಕೊಡಬೇಕು. ಇದರ ಬಗ್ಗೆ ಎಕ್ಸಸ್ ಲ್ಯಾಂಡ್‌ಗೆ ಅಮೆಂಡ್‌ಮೆಂಟ್ ತರಬೇಕು.

ಅಧ್ಯಕ್ಷರು : ಏನು? ಯಾವುದಕ್ಕೆ?

ಶ್ರೀ ಜೆ.ಸಿ. ಮಾಧುಸ್ವಾಮಿ : ಫಾರೆಸ್ಟ್ ಲ್ಯಾಂಡ್ ಕೆಟಗರಿ ಸಿ ಅಂಡ್ ಡಿ ಲ್ಯಾಂಡ್‌ಗೆ.

ಅಧ್ಯಕ್ಷರು : ತಾವು ಸಚಿವರು ಇಷ್ಟನ್ನು ಕ್ಲಾರಿಫೈ ಮಾಡಿಬಿಡಿ why are you going all around the world? Whether you are going to take away this responsibility from the Deputy Commissioner and to hand over to the Land Tribunal and one or two other clarification. The House is in a mood to concede. ಎಕ್ಸ್‌ಪ್ಲೈನ್ ಮಾಡಿ.

ಶ್ರೀ ಬಿ. ಸೋಮಶೇಖರ್ : ಮಾನ್ಯ ಅಧ್ಯಕ್ಷರೇ, ಈಗ ಈ ಅಪ್ಲಿಕೇಷನ್ ಫಾರಂ ನಂಬರ್ 7 ಹಾಕಿದ್ದರೆ ಅಂತಹವರಿಗೆ ತೀರ್ಮಾನ ಮಾಡತಕ್ಕಂಥ ಅಧಿಕಾರ ಲ್ಯಾಂಡ್ ಟ್ರಿಬ್ಯೂನಲ್‌ಗೆ ಇದೆ. ಅವರು ಅದನ್ನು ಮೆರಿಟ್ ಮೇಲೆ ತೀರ್ಮಾನ ಮಾಡುತ್ತಾರೆ. ಸೆಕ್ಷನ್ 77ರಲ್ಲಿ ಸ್ಪಾಟ್ ಇನ್ಸ್‌ಪೆಕ್ಷನ್ ಮಾಡಿ ಅಕ್ಯುಪೆನ್ಸಿ ರೈಟ್ಸ್ ಕೊಡತಕ್ಕಂಥ ಅಧಿಕಾರ ಅಸಿಸ್ಟೆಂಟ್ ಕಮೀಷನರ್‌ಗೆ ಇದೆ. ಈಗ ಸೆಕ್ಷನ್ 77ಗೆ (ಎ)ಗೆ ಅಮೆಂಡ್‌ಮೆಂಟ್ ತಂದು ಮಾಡುತ್ತಿರುವುದರಿಂದ ಯಾರು ಅರ್ಜಿ ಹಾಕಿಲ್ಲ ಅಂತಹವರಿಗೆ ಸೋಮೋಟೋ ಸ್ಥಳ ಪರಿಶೀಲನೆ ಮಾಡಿ ಸ್ಪೆಷಲ್ ಡಿ.ಸಿ.ಗೆ ನಿಜವಾಗಿ ಪೊಜಿಷನ್ ಇದ್ದು, ಯಾವುದೋ ಕಾರಣದಿಂದ ಅವನ್ನು ಗೊತ್ತಿಲ್ಲದೆ ಅರ್ಜಿ ಹಾಕಿಕೊಂಡು ಅಕ್ಯುಪೆನ್ಸಿ ರೈಟ್ಸನ್ನು ಅವನ ಹೆಸರಿಗೆ ಮಾಡಿಕೊಳ್ಳುವುದಕ್ಕೆ ಆಗದೇ ಇದ್ದರೆ ಅಂತಹವರಿಗೆ ಅಧಿಕಾರ ಕೊಡುವುದಕ್ಕೆ ಜಿಲ್ಲಾಧಿಕಾರಿಗಳಿಗೆ ಕೊಡುವಂತಹ ಅಧಿಕಾರವನ್ನು ನಾವು ತಂದಿದ್ದೇವೆ.

ಶ್ರೀ ಕಾಗೋಡು ತಿಮ್ಮಪ್ಪ : ಹಿಂದೆ ಅವಕಾಶ ಕೊಟ್ಟಿದ್ದೀರಾ?

ಶ್ರೀ ಬಿ. ಸೋಮಶೇಖರ್ : ಅಂಥ ಅವಕಾಶ ಕಾನೂನಿನಲ್ಲಿ ಇಲ್ಲ. ಈಗ ಕಾನೂನಿನಲ್ಲಿ ಪ್ರೊವೈಡ್ ಮಾಡುತ್ತಿದ್ದೇವಲ್ಲ.

ಶ್ರೀ ಕಾಗೋಡು ತಿಮ್ಮಪ್ಪ : ಹಿಂದೆ ಯಾರಿಗೂ ಕೊಟ್ಟಿಲ್ಲವೇ?

ಶ್ರೀ ಬಿ. ಸೋಮಶೇಖರ್ : ಹಿಂದೆ ಯಾವುದೂ ಕೊಟ್ಟಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ : ಕೊಟ್ಟಿದ್ದಾರೆ, 3-4 ಬಾರಿ ಕೊಟ್ಟಿದ್ದಾರೆ. ಸೆಕ್ಷನ್ 77ರ ಪ್ರಕಾರ ಬಂದಂತಹ ಜಮೀನನ್ನು ಡಿಸ್‌ಪೋಸ್ ಮಾಡತಕ್ಕಂಥ ಅಧಿಕಾರ ಟ್ರಿಬ್ಯೂನಲ್‌ಗೆ ಇರುವುದು. ಈಗಲೂ ಕೂಡ ನೀವು 77ಕ್ಕೆ ಅಮೆಂಡ್‌ಮೆಂಟ್ ಮಾಡುತ್ತಿದ್ದೀರಿ. ಅದಕ್ಕಾಗಿ ಟ್ರಿಬ್ಯೂನಲ್‌ಗೆ ಸೆಕ್ಷನ್ 77 ಪ್ರಕಾರ ಎಕ್ಸ್‌ಸೈಜ್ ಮಾಡುವುದಕ್ಕೆ ಯಾವ್ಯಾವುದು ಒಂದು ಹೆಚ್ಚುವರಿ ಜಮೀನು ಆಯಿತೆಂದರೆ ಅಥವಾ ಟೆನೆಂಟ್ ಈ ರೀತಿ ಕೇಸಸ್ ಹಾಕದೆ ಇದ್ದರೆ ವೆಸ್ಟೆಡ್ ಆಗಿದ್ದರೆ ಇಂತಹವನ್ನು ಡಿಸ್‌ಪೋಸ್ ಮಾಡುವುದಕ್ಕೆ ನಮ್ಮ ಟ್ರಿಬ್ಯೂನಲ್‌ನಲ್ಲಿ ಅಧಿಕಾರ ಇದೆ. ಆದುದರಿಂದ ನಾವು ಇದನ್ನು ಕೂಡ ಟ್ರಿಬ್ಯೂನಲ್‌ಗೆ ಕೊಡಿ ಎಂದು ಕೇಳುತ್ತಿರುವುದು.

ಶ್ರೀ ಬಿ. ಸೋಮಶೇಖರ್ : ಅದಕ್ಕೆ ಅರ್ಜಿ ಹಾಕಬೇಕಾಗುತ್ತದೆ. ಯಾರೋ ಅರ್ಜಿ ಹಾಕುತ್ತಾರೆ, ಮತ್ತೆ ಗೊಂದಲವಾಗುತ್ತದೆ. ಅದಕ್ಕೆ ನಾವು ಹೇಳುವುದು, ಯಾರಿಗೆ ನಿಜವಾಗಲೂ ಅರ್ಜಿ ಹಾಕುವುದಕ್ಕೆ ಆಗಿಲ್ಲ ಅಂತಹವರಿಗೆ ಸೋಮೋಟೊ ಜಿಲ್ಲಾಧಿಕಾರಿಗಳು ಸ್ಥಳ ಪರಿಶೀಲನೆ ಮಾಡಿ ಅಲ್ಲಿ ತೀರ್ಮಾನ ಮಾಡಿ ಮಾಡಬೇಕು. ಅದನ್ನು ಕಮಿಟಿಗೆ ಹಾಕಿದರೆ 10 ವರ್ಷವಾದರೂ ಆಗುವುದಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ : ಈಗಲೂ ಅರ್ಜಿ ಹಾಕಲೇಬೇಕು.

ಶ್ರೀ ಸಿದ್ಧರಾಮಯ್ಯ : ಮತ್ತೆ ಟ್ರಿಬ್ಯೂನಲ್‌ಗೆ ಹೋಗಿ ಅದರ ಮೇಲೆ ಅವಾರ್ಡ್ ಆಗಿ ಅದರ ಮೇಲೆ ಮತ್ತೆ ಸುಪ್ರೀಂ ಕೋರ್ಟ್, ಹೈಕೋರ್ಟ್ ಎಂದು ಹೋಗಿ ಮತ್ತೆ ಇದು ಬಹಳಷ್ಟು ಸಮಯ ತೆಗೆದುಕೊಳ್ಳುತ್ತದೆ. ಇದು ಟೈಂ ಸೇವ್ ಆಗಬೇಕು, ಮತ್ತೆ ಸಹಹಾಯ ಮಾಡಬೇಕೆನ್ನುವ ಕಾರಣಕ್ಕೋಸ್ಕರ ಜಿಲ್ಲಾಧಿಕಾರಿಗಳಿಗೆ ಅಧಿಕಾರ ಕೊಡುತ್ತಿರತಕ್ಕಂಥಾದ್ದು. He must inspect the land and whether a particular person who claims to be a tenant, has been in possession and enjoyment of the land continuously ಆ ತರಹ ಲ್ಯಾಂಡ್ ಇದ್ದರೆ ಅಂತಹವರಿಗೆ ಡಿ.ಸಿ.ನೇ ಕೊಡತಕ್ಕಂಥಾದ್ದು. ಆದುದರಿಂದ ಡಿ.ಸಿ.ಗೆ ಅಧಿಕಾರ ಇರುವುದು ಒಳ್ಳೆಯದು. ಮತ್ತೆ ನೀವು ಎಳೆದುಕೊಂಡು ಹೋಗುವುದಕ್ಕೆ ಏನು ಮಾಡಬೇಕೋ ಅದನ್ನೆಲ್ಲಾ ಮಾಡುತ್ತಿದ್ದೀರಿ.

ಶ್ರೀ ಕಾಗೋಡು ತಿಮ್ಮಪ್ಪ : ಏಕೆ ಹೇಳುತ್ತೇನೆಂದು ಕೇಳಿ. ಡಿ.ಸಿ.ಗಳ ಕೈಯಲ್ಲಿ ಇರುವ ಅರ್ಜಿಗಳು ಎಷ್ಟಿದೆ ಎಂದು ನಾವು ನೋಡಿದ್ದೇವೆ. ಅದಕ್ಕಾಗಿ ನಾವು ಹೊಡೆದುಕೊಳ್ಳುತ್ತಿರುವುದು. ನೀವು ಟೈಂ ಫಿಕ್ಸ್ ಮಾಡಿಲ್ಲ.

ಶ್ರೀ ಬಿ. ಸೋಮಶೇಖರ್ : ಇಂತಹ ಪ್ರಕರಣಗಳನ್ನು ಒಂದು ವರ್ಷದಲ್ಲಿ ಮಾಡಬೇಕು ಎಂದು ಆಕ್ಟ್‌ನಲ್ಲಿ ತರುತ್ತಿದ್ದೇವೆ He is duty bound to completely do this exercise within one year. ಒಂದು ವರ್ಷದಲ್ಲಿ ಮುಗಿಸಬೇಕು. ಇದರಲ್ಲಿ ನಿಮ್ಮದು, ನಮ್ಮದು ಉದ್ದೇಶ ನಿಜವಾಗಿ ಗೇಣಿದಾರರಿಗೆ ಸಹಾಯ ಮಾಡಬೇಕೆಂದು ಇರುವುದರಿಂದ ಈ ಒಂದು ಸಣ್ಣ ಅಮೆಂಡ್‌ಮೆಂಟ್ ತಾವು ಮಂಜೂರಾತಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಜಿ.ಎಸ್. ಶಿವನಂಜಪ್ಪ : ಮಾನ್ಯ ಅಧ್ಯಕ್ಷರೆ, ಅಲ್ಲ, ಇಂಟೇರಿಯರ್ ಇನಾಂಗೆ ಏನೂ ಮಾಡಲೇ ಇಲ್ಲ. ಲಕ್ಷಗಟ್ಟಲೆ ಎಕರೆ ಇದೆ. ಇದರೊಳಗೆ ಮಾಡಬೇಕು. ಇನ್ನು ಯಾವಾಗ ಆಗುತ್ತದೆ?

ಅಧ್ಯಕ್ಷರು : ಅವರು ಉತ್ತರ ಹೇಳಿದ್ದು ಆಯಿತು, ಅದು ಇದಕ್ಕೆ ಅನ್ವಯಿಸುವುದಿಲ್ಲ, ಈಗ ಓಟ್‌ಗೆ ಹಾಕುತ್ತೇನೆ.

ಕರ್ನಾಟಕ ಭೂಸುಧಾರಣೆಗಳ (ತಿದ್ದುಪಡಿ) ವಿಧೇಯಕ 1997

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಬಿ. ಸೋಮಶೇಖರ್ (ಕಂದಾಯ ಸಚಿವರು) : ಮಾನ್ಯ ಅಧ್ಯಕ್ಷರೇ, 1997ರ ಕರ್ನಾಟಕ ಭೂಸುಧಾರಣೆಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ,

"1997ರ ಕರ್ನಾಟಕ ಭೂ ಸುಧಾರಣೆಗಳ (ತಿದ್ದುಪಡಿ) "ವಿಧೇಯಕವನ್ನು ಪರ್ಯಾಲೋಚಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2

ಅಧ್ಯಕ್ಷರು : "ಖಂಡ 2 ಈ ವಿಧೇಯಕದ ಅಂಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

ಖಂಡ 1 ಇತ್ಯಾದಿ

ಅಧ್ಯಕ್ಷರು : ಪ್ರಸ್ತಾವ ಏನೆಂದರೆ,

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ, ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಬಿ. ಸೋಮಶೇಖರ್ (ಕಂದಾಯ ಮಂತ್ರಿಗಳು) : ಮಾನ್ಯ ಅಧ್ಯಕ್ಷರೇ, 1997ರ ಕರ್ನಾಟಕ ಭೂ ಸುಧಾರಣೆಗಳ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ, "1997ರ ಕರ್ನಾಟಕ ಭೂ ಸುಧಾರಣೆಗಳ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ವಿಧೇಯಕ, 1997

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಬಿ. ಸೋಮಶೇಖರ್ (ಕಂದಾಯ ಮಂತ್ರಿಗಳು) : ಮಾನ್ಯ ಅಧ್ಯಕ್ಷರೇ, 1997ರ ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು.

ಶ್ರೀ ಬಿ. ಸೋಮಶೇಖರ್ : ಮಾನ್ಯ ಅಧ್ಯಕ್ಷರೇ, ಇದು ಸಹ ಒಂದು ತಿದ್ದುಪಡಿ ವಿಧೇಯಕ. ಇದರಲ್ಲಿ ಸೆಕ್ಷನ್ 94ನೇ ಕರ್ನಾಟಕ ಲ್ಯಾಂಡ್ ರೆವಿನ್ಯೂ ಆಕ್ಟ್ 64ಕ್ಕೆ ತಿದ್ದುಪಡಿಯನ್ನು ನಾವು ಇವತ್ತು ತರುತ್ತಿದ್ದೇವೆ. ಇದು ಏನೆಂದರೆ ನಮ್ಮ ಸರ್ಕಾರಿ ಜಮೀನಿನಲ್ಲಿ ಬಡವರು ಬಗರ್ ಹುಕುಂನಿಂದ ವ್ಯವಸಾಯ ಮಾಡಿಕೊಂಡು ಬಂದಿದ್ದಾರೆ, ಅವರಿಗೆ 1990ನೇ ಇಸವಿ ಒಳಗಡೆ ಫಾರಂ ನಂ 50ರಲ್ಲಿ ಅರ್ಜಿ ಹಾಕಿ ಅವರ ಹೆಸರಿಗೆ ಖಾತೆಯನ್ನು ಮಾಡಿಸಿಕೊಳ್ಳಬೇಕೆಂದು ಕಾನೂನನ್ನು ತಂದಿತ್ತು. ಬಡವರು ಗೊತ್ತಿಲ್ಲದೆ ಫಾರಂ ನಂಬರ್ 50ನ್ನು ಹಾಕಿ ತಮ್ಮ ಹೆಸರಿಗೆ ಖಾತೆ ಮಾಡಿಸಿಕೊಳ್ಳಬೇಕಾದಂತಹ ಪ್ರಯತ್ನ ಮಾಡುವುದಕ್ಕೆ ಆಗಲಿಲ್ಲ. ಆದರೂ ಅವರು ತಮ್ಮ ಎಂಜಾಯ್‌ಮೆಂಟ್‌ನಲ್ಲಿ ಆ ಸರ್ಕಾರಿ ಜಮೀನಿನಲ್ಲಿ ಇದ್ದಾರೆ. ಇಂತಹವರಿಗೆ ಮತ್ತೆ ಒಂದು ಅವಕಾಶ ಕೊಟ್ಟು ಜಿಲ್ಲಾಧಿಕಾರಿಗಳು ಸ್ಥಳ ಪರಿಶೀಲನೆ ಮಾಡಿ ಯಾರು ನಿಜವಾಗಲೂ ಅಂತಹ ಜಮೀನಿನಲ್ಲಿ ಇದ್ದಾರೆ, ಒಂದು ಯೂನಿಟ್‌ಗೆ ಒಳಗಡೆ ಇರತಕ್ಕಂಥವರಿಗೆ ಸರ್ಕಾರ ಅಧಿಕಾರವನ್ನು ಕೊಡುತ್ತಿದ್ದೇವೆ. ಇದು ನಮ್ಮ ಕರ್ನಾಟಕದಾದ್ಯಂತ ಬಹಳ ಕೇಸುಗಳು ನಮ್ಮ ಸರ್ಕಾರದ ಗಮನಕ್ಕೆ ಬಂತು.